# ಅಲ್ ಬಿರೂನಿಯ ಭಾರತ : ಸಂಪುಟ 1

**ಭಾರತದ ಧರ್ಮ (ರಿಲಿಜನ್), ತತ್ವಶಾಸ್ತ್ರ, ಸಾಹಿತ್ಯ, ಭೂಗೋಳ, ಚರಿತ್ರೆ, ಖಗೋಳಶಾಸ್ತ್ರ, ಪದ್ಧತಿಗಳು (ಆಚರಣೆಗಳು), ಕಾನೂನುಗಳು ಮತ್ತು ಜ್ಯೋತಿಷ್ಯ ಶಾಸ್ತ್ರ, ಕ್ರಿ.ಶ. 1030.**

**ಡಾ. ಎಡ್ವರ್ಡ್ ಸಿ. ಸ್ಯಾಚೋ – ಪ್ರೊಫೆಸರ್ ರಾಯಲ್ ಯುನಿವರ್ಸಿಸಿಟಿ ಮತ್ತು ಸೆಮಿನರಿ ಆಫ್ ಓರಿಯಂಟಲ್ ಲ್ಯಾಂಗವೇಜಸ್, ಪ್ರಿನ್ಸಿಪಾಲ್**

## ಅಧ್ಯಾಯ 18

**ಭಾರತದ ನದಿಗಳು, ಮಹಾಸಾಗರ ರಾಜ್ಯಗಳ ನಡುವಿನ ಮತ್ತು ಅದರ ದೇಶದ ಗಡಿಗಳ ನಡುವಿನ ಅಂತರಗಳ ವಿವರ**

### ವಾಸಯೋಗ್ಯ ಜಗತ್ತು ಮತ್ತು ಮಹಾಸಾಗರ

ವಾಸಯೋಗ್ಯ ಜಗತ್ತನ್ನು ಕುರಿತು ಹೇಳುವುದಾದರೆ ಅದು ಭೂಮಿಯ ಉತ್ತರಾರ್ಧದಲ್ಲಿ, ಅಂದರೆ ನಿಖರವಾಗಿ ಈ ಉತ್ತರಾರ್ಧದ ಅರ್ಧದಷ್ಟು ಜಾಗವನ್ನು ವ್ಯಾಪಿಸಿದೆ ಅಂದರೆ ಇಡೀ ಭೂಮಿಯ ಕಾಲುಭಾಗದಷ್ಟನ್ನು ವ್ಯಾಪಿಸಿಕೊಂಡಿದೆ ಎಂದು ಓದುಗರು ಕಲ್ಪಿಸಿಕೊಳ್ಳಬೇಕು. ಈ ವಾಸಯೋಗ್ಯ ಭೂಭಾಗದ ಸುತ್ತಲೂ ಕಡಲ ತೀರವಿದೆ. ಅದನ್ನು ಪಶ್ಚಿಮದವರು ಮತ್ತು ಪೂರ್ವದವರಿಬ್ಬರೂ ಮಹಾಸಾಗರವೆಂದು[1] ಕರೆಯುತ್ತಾರೆ; ತಮ್ಮ ದೇಶದ ಸಮೀಪವಿರುವ ಈ ಕಡಲತೀರದ ಪಶ್ಚಿಮಭಾಗವನ್ನು ಗ್ರೀಕರು ಒಕೀಯಾನೊಸ್ ಎಂದು ಕರೆಯುತ್ತಾರೆ. ಈ ಮಹಾಸಾಗರವು ಅದರಾಚೆ ಪಶ್ಚಿಮ ಮತ್ತು ಪೂರ್ವ ಈ ಎರಡೂ ದಿಕ್ಕಿನಲ್ಲಿ ಇರಬಹುದಾದ ಖಂಡಗಳು ಅಥವಾ ವಾಸಯೋಗ್ಯ ದ್ವೀಪಗಳಿಂದ ಈ ವಾಸಯೋಗ್ಯ ಭೂಭಾಗವನ್ನು ಪ್ರತ್ಯೇಕಿಸುತ್ತದೆ. ಕತ್ತಲು, ನೀರಿನ ಸಾಂದ್ರತೆ, ಆಳದಿಂದಾಗಿ ಈ ಮಹಾಸಾಗರವನ್ನು ಕ್ರಮಿಸುವುದು ಕಷ್ಟ. ಅಲ್ಲಿ ಕ್ರಮಿಸಬಹುದಾದ ರಸ್ತೆಗಳು ಕಂಡುಬರುವುದಿಲ್ಲವಾದ್ದರಿಂದ, ಮತ್ತು ಗೊತ್ತಿಲ್ಲದೆ ಮುನ್ನುಗ್ಗುವುದು ಅಪಾಯಕಾರಿಯಾದ್ದರಿಂದ ಮತ್ತು, ಹಾಗೆ ಮುಂದುವರೆಯುವದು ಲಾಭದಾಯಕವೂ ಅಲ್ಲವಾದ್ದರಿಂದ, ಹಿಂದಿನ ಜನ ಕಡಲು ಮತ್ತು ಅದರ ತೀರದ ಮೇಲೆ ಅಂತಹ ದುರ್ಗಮ ಹಾದಿಗಳನ್ನು, ಅವು ಪ್ರವೇಶಾರ್ಹವಲ್ಲವೆಂಬ ಕಾರಣಕ್ಕಾಗಿಯೇ ಗುರುತು ಮಾಡಿಟ್ಟಿದ್ದಾರೆ,

---

[1] ಬಿರೂನಿಯು ಮುಹೀತ್ ಎಂಬ ಅರೇಬಿಕ್ ಪದವನ್ನು ಬಳಸಿದ್ದಿರಬೇಕು ಈ ಪದವು ಮಹಾಸಾಗರ ಎಂಬ ಅರ್ಥವನ್ನೂ ಕೊಡುತ್ತದೆ ಮತ್ತು ಅರಿತವನು ಅಥವಾ ಅರಿವುಳ್ಳ ಎಂಬ ಅರ್ಥವನ್ನೂ ಕೊಡುತ್ತದೆ. ಇಂಗ್ಲೀಷ್ ಅನುವಾದಕರು ಅದನ್ನು the comprehending one, comprehending ocean ಎಂದು ಗ್ರಹಿಸಿದ್ದಾರೆ. ಓಶಿಯನ್ ಪದಕ್ಕೆ ಒಕಿಯಾನೊಸ್ ಎಂಬ ಗ್ರೀಕ್ ಪದ ಮೂಲವಾಗಿದೆ. ಬಿರೂನಿ ಗ್ರೀಕರು ಒಕಿಯಾನೊಸ್ ಎಂದು ಕರೆಯುವುದರ ಪ್ರಸ್ತಾಪವನ್ನೂ ಮಾಡಿದ್ದಾನೆ.

ವಾಸಯೋಗ್ಯ ಜಗತ್ತು ಕೆಲವು ಜಾಗಗಳಲ್ಲಿ ಉತ್ತರದ ದಿಕ್ಕಿನಲ್ಲಿ ಭೂಶಿರಗಳು ಮತ್ತು ಕೊಲ್ಲಿಗಳ ಆಕಾರದಲ್ಲಿ ಚಾಚಿಕೊಳ್ಳುತ್ತದೆ ಎನ್ನುವುದನ್ನು ಬಿಟ್ಟರೆ ಶೀತದ ಕಾರಣಕ್ಕೆ ಉತ್ತರದ ದಿಕ್ಕಿನಲ್ಲಿ ಹೆಚ್ಚು ವಿಸ್ತೃತಗೊಂಡಿಲ್ಲ. ದಕ್ಷಿಣದಲ್ಲಿ ಅದು ಕಡಲ ತೀರದವರೆಗೆ ಚಾಚಿಕೊಂಡಿದೆ, ಈ ಕಡಲ ತೀರವನ್ನು ಪಶ್ಚಿಮದವರು ಮತ್ತು ಪೂರ್ವದವರಿಬ್ಬರೂ ಮಹಾಸಾಗರವೆಂದು ಕರೆಯುತ್ತಾರೆ. ದಕ್ಷಿಣದ ಈ ಮಹಾಸಾಗರವು ಕ್ರಮಿಸಲು ಯೋಗ್ಯವಾಗಿದೆ. ಆದರೆ ಇದು ವಾಸಯೋಗ್ಯ ಭೂಭಾಗದ ದಕ್ಷಿಣದ ಕೊಟ್ಟಕೊನೆಯೇನಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಈ ತುದಿಯು ದಕ್ಷಿಣದಲ್ಲಿ ಇನ್ನೂ ಸ್ವಲ್ಪ ದೂರದವರೆಗೆ ದೊಡ್ಡ ಮತ್ತು ಸಣ್ಣ ದ್ವೀಪಗಳ ರೂಪದಲ್ಲಿ ಮಹಾಸಾಗರದ ಒಳಗೆ ವಿಸ್ತರಿಸಲ್ಪಟ್ಟಿದೆ. ದಕ್ಷಿಣದ ಈ ಜಾಗದಲ್ಲಿ ತಮ್ಮ ಸ್ಥಾನಕ್ಕಾಗಿ ಭೂಮಿ ಮತ್ತು ನೀರು ಪರಸ್ಪರ ಪೈಪೋಟಿಗೆ ಇಳಿಯುತ್ತವೆ. ಹೀಗಾಗಿ ಒಂದು ಜಾಗದಲ್ಲಿ ಭೂಖಂಡವು ಸಮುದ್ರದೊಳಗೆ ಚಾಚಿಕೊಳ್ಳುತ್ತದೆ, ಮತ್ತು ಇನ್ನೊಂದು ಜಾಗದಲ್ಲಿ ಸಮುದ್ರವು ಭೂಖಂಡದ ಒಳಗೆ ಆಳವಾಗಿ ನುಗ್ಗುತ್ತದೆ.

ಭೂಮಿಯ ಪಶ್ಚಿಮದ ಅರ್ಧದಲ್ಲಿ ಭೂಖಂಡವು ಸಮುದ್ರದೊಳಗೆ ಚಾಚಿಕೊಂಡಿದೆ ಮತ್ತು ತನ್ನ ಕಡಲ ತೀರವನ್ನು ದಕ್ಷಿಣದವರೆಗೆ ವಿಸ್ತರಿಸಿಕೊಂಡಿದೆ. ಈ ಭೂಖಂಡದೊಳಗೆ ಪಶ್ಚಿಮದ ನಿಗ್ರೊಗಳು ವಾಸವಾಗಿದ್ದಾರೆ. ಅಲ್ಲಿಂದ ಗುಲಾಮರನ್ನು ಕರೆದು ತರಲಾಗುತ್ತದೆ. ಅಲ್ಲಿ ಚಂದ್ರ ಪರ್ವತಗಳಿವೆ[2], ಮತ್ತು ನೈಲ್ ನದಿಯು ಅವುಗಳ ಒಳಗೆಲ್ಲೋ ಉಗಮವಾಗುತ್ತದೆ. ಇದರ ತೀರದಲ್ಲಿ, ತೀರಕ್ಕೆ ಸಮೀಪವಿರುವ ದ್ವೀಪಗಳಲ್ಲಿ ಜಾಂಝ್ ನ ಹಲವು ಬುಡಕಟ್ಟು ಸಮುದಾಯಗಳು ವಾಸಿಸುತ್ತಿವೆ. ಭೂಮಿಯ ಈ ಪಶ್ಚಿಮಾರ್ಧದಲ್ಲಿ ಹಲವಾರು ಕೊಲ್ಲಿಗಳು ಭೂಖಂಡದೊಳಗೆ ಮುನ್ನುಗ್ಗಿವೆ. ಬರ್ಬೆರಾ ಕೊಲ್ಲಿ, ಕ್ಲಿಸ್ಮಾ ಕೊಲ್ಲಿ (ಕೆಂಪು ಸಮುದ್ರ), ಪರ್ಶಿಯನ್ ಕೊಲ್ಲಿ, ಹೀಗೆ; ಈ ಕೊಲ್ಲಿಗಳ ಮಧ್ಯದ ಪಶ್ಚಿಮದ ಭೂಖಂಡವು ಹೆಚ್ಚು ಕಡಿಮೆ ಮಹಾಸಾಗರದೊಳಗೆ ಚಾಚಿಕೊಂಡಿದೆ.

ಭೂಮಿಯ ಪಶ್ಚಿಮಾರ್ಧವು ದಕ್ಷಿಣದ ಸಮುದ್ರದೊಳಗೆ ಮುನ್ನುಗ್ಗಿದ ಹಾಗೆ ಭೂಮಿಯ ಪೂರ್ವ ಭಾಗದಲ್ಲಿ ಸಮುದ್ರವು ಉತ್ತರದ ಭೂಖಂಡದೊಳಗೆ ಮುನ್ನುಗ್ಗಿ ಹಲವೆಡೆ ಕೊಲ್ಲಿಗಳನ್ನು ಮತ್ತು ಅಳಿವೆಗಳನ್ನು ನಿರ್ಮಿಸಿದೆ. ಕೊಲ್ಲಿಗಳು ಸಮುದ್ರದ ಭಾಗಗಳಾದರೆ, ಅಳಿವೆ(ನದೀಮುಖ)ಗಳು ನದಿಗಳು ಸಮುದ್ರವನ್ನು ಕೂಡುವ ತಾಣವಾಗಿವೆ. [ದಕ್ಷಿಣದ] ಈ ಸಮುದ್ರವು ಅದರೊಳಗೆ ಇರುವ ಯಾವುದೋ ಒಂದು ದ್ವೀಪದ ಹೆಸರನ್ನು ಅಥವಾ ಅದಕ್ಕೆ ತಾಗಿರುವ ತೀರ ಪ್ರದೇಶದ ಹೆಸರನ್ನು ಪಡೆದಿದೆ. ಆದರೆ ಇಲ್ಲಿ ಮುಖ್ಯವಾಗಿ ಭಾರತ ಭೂಖಂಡದ [ಹಿಂದ್ ಭೂಖಂಡದ] ಎಲ್ಲೆಯಲ್ಲಿರುವ ಕಡಲ ತೀರವನ್ನು ಕುರಿತು ಮಾತನಾಡುತ್ತಿದ್ದೇವೆ, ಅದನ್ನು ಇಂಡಿಯನ್ ಓಶನ್ [ಹಿಂದೂ ಮಹಾಸಾಗರ] ಎಂದು ಕರೆಯಲಾಗುತ್ತದೆ.

---

[2] Mountains of the moon, ಅಥವ ಜಿಬೆರಿ ಕುಮ್ರಿ. ಪ್ರಾಯಶಃ ಬಿರೂನಿ ಇಲ್ಲಿ ಪೂರ್ವ ಆಫ್ರಿಕದ ಸೀಳು ಕಣಿವೆಯ ಪರ್ವತಶ್ರೇಣಿಯನ್ನು ಸೂಚಿಸುತ್ತಿದ್ದಾನೆ.

**ಏಶಿಯ ಮತ್ತು ಯುರೋಪಿನ ಪರ್ವತ ಭೂವಿಜ್ಞಾನ ವ್ಯವಸ್ಥೆಯ ವಿವರ**

ವಾಸಯೋಗ್ಯ ಭೂಪ್ರದೇಶದ ಪರ್ವತ ಭೂವಿಜ್ಞಾನ ವ್ಯವಸ್ಥೆಯ ವಿವರಗಳನ್ನು ಕುರಿತು ನೋಡುವುದಾದರೆ, ಭೂಮಿಯ ಮಧ್ಯದ ಅಕ್ಷಾಂಶದವರೆಗೆ ವಿಸ್ತರಿಸಲ್ಪಟ್ಟ ಮೊನಚಾದ ಪೈನ್ ಮರದ ಕಶೇರುಖಂಡಗಳ ಹಾಗಿನ, ಮತ್ತು ಪೂರ್ವದಿಂದ ಪಶ್ಚಿಮಕ್ಕೆ ಚೀನ, ಟಿಬೆಟ್, ತುರ್ಕರ ದೇಶ, ಕಾಬೂಲ್, ಬಡಾಕ್ಷಾನ್, ತೊಖಾರಿಸ್ತಾನ್, ಬಾಮಿಯಾನ್, ಎಲ್ಘೋರ್, ಖುರಾಶಾನ್, ಮೆದಿಯಾ, ಆಧರ್‌ಬೈಜಾನ್, ಅರಮೇನಿಯಾ, ರೋಮನ್ ಚಕ್ರಾಧಿಪತ್ಯ, ಫ್ರಾಂಕರ ದೇಶ ಮತ್ತು ಜಲಾಲಿಕ (ಗ್ಯಾಲೀಶಿಯನ್ಸ್) ದೇಶಗಳನ್ನು ಹಾದು ಹೋಗುವ ಉದ್ದನೆಯ ಉನ್ನತ ಪರ್ವತ ಶ್ರೇಣಿಗಳನ್ನು ಕಲ್ಪಿಸಿಕೊಳ್ಳಿ. ಬಹು ಉದ್ದನೆಯ ಈ ಪರ್ವತ ಶ್ರೇಣಿಯು ಅಡ್ಡವಾಗಿಯೂ ಬಹಳ ವಿಸ್ತಾರವಾದುದು. ಜೊತೆಗೆ ನಡುನಡುವೆ ಅನೇಕ ತಿರುವುಗಳನ್ನು ಕಾಣಬಲ್ಲಿರಿ. ಅಲ್ಲಲ್ಲಿ ಪರ್ವತದಿಂದ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಎರಡೂ ದಿಕ್ಕುಗಳಲ್ಲಿ ಹರಿದು ಬರುವ ನೀರಿನ ತೊರೆಗಳಿಂದ ತೋಯುವ ವಾಸಯೋಗ್ಯ ಬಯಲುಗಳನ್ನೂ ಕಾಣುವಿರಿ. ಅಂತಹ ಒಂದು ವಾಸಯೋಗ್ಯ ಬಯಲು ಭಾರತವಾಗಿದೆ [ಹಿಂದ್]. ಇದರ ದಕ್ಷಿಣದ ಎಲ್ಲೆಯಲ್ಲಿ ಮೇಲೆ ಉಲ್ಲೇಖಿಸಿದ ಹಿಂದು ಮಹಾಸಾಗರವಿದ್ದರೆ, ಉಳಿದ ಮೂರೂ ಬದಿಯ ಎಲ್ಲೆಗಳಲ್ಲಿ ಉನ್ನತ ಪರ್ವತ ಸಾಲುಗಳಿವೆ. ಈ ಪರ್ವತಗಳಿಂದ ನದಿಗಳು ಹರಿದು ಬರುತ್ತವೆ.

**ನದಿ ಪ್ರವಾಹಗಳಿಂದ ಶೇಖರಿಸಲ್ಪಟ್ಟ ಮೆಕ್ಕಲು ಮಣ್ಣಿನ ಪ್ರದೇಶ**

ಭಾರತದ ಮಣ್ಣನ್ನು ನೀವು ಕಣ್ಣಾರೆ ನೋಡಿ ಅದರ ಸ್ವರೂಪವನ್ನು ಕುರಿತು ಹೇಳುವುದಾದರೆ, ಭೂಮಿಯನ್ನು ಎಷ್ಟು ಆಳಕ್ಕೆ ಅಗೆದರೂ ಸಿಗುವ ದುಂಡನೆಯ ಕಲ್ಲುಗಳು, ಈ ಕಲ್ಲುಗಳು ಪರ್ವತಗಳ ಸಮೀಪ, ಎಲ್ಲಿ ನದಿಗಳ ಹರಿವು ರುದ್ರಸ್ವರೂಪದಲ್ಲಿರುತ್ತವೆಯೋ ಅಲ್ಲಿ ಬೃಹದಾಕಾರದಲ್ಲಿರುತ್ತವೆ, ಪರ್ವತಗಳಿಂದ ದೂರ ಹೋದ ಹಾಗೆ, ನದಿಗಳ ಹರಿವು ಸೌಮ್ಯವಾಗುತ್ತ ಹೋದ ಹಾಗೆ ಈ ಕಲ್ಲುಗಳು ಕಿರಿದಾಗುತ್ತ ಹೋಗುತ್ತವೆ. ನದಿಗಳ ಮುಖಜ ಭೂಮಿಯಲ್ಲಿ ಅಂದರೆ ಅವು ಸಮುದ್ರವನ್ನು ಸೇರುವ ಪ್ರದೇಶದಲ್ಲಿ ಇದೇ ಕಲ್ಲುಗಳು ಕುಟ್ಟಿ ಪುಡಿ ಮಾಡಿದ ರೀತಿಯಲ್ಲಿ ಮರಳಿನ ಸ್ವರೂಪದಲ್ಲಿ ಕಂಡುಬರುತ್ತವೆ. ನೀವು ಈ ಎಲ್ಲ ಅಂಶಗಳನ್ನು ಪರಿಗಣಿಸಿದರೆ ಭಾರತವು ಇದ್ದ ಪ್ರದೇಶವು ಒಂದು ಕಾಲದಲ್ಲಿ ಸಮುದ್ರವೇ ಆಗಿತ್ತು, ಮತ್ತು ಕಾಲ ಕ್ರಮೇಣ ನದಿಗಳ ಪ್ರವಾಹವು ಹಂತ ಹಂತವಾಗಿ ಕೊಚ್ಚಿ ತಂದ ಮೆಕ್ಕಲು ಮಣ್ಣಿನಿಂದ ತುಂಬಲ್ಪಟ್ಟಿದೆ ಎಂದು ಯೋಚಿಸದೇ ಇರಲಾರಿರಿ.

**ಮಧ್ಯದೇಶ, ಕನೌಜ್, ಮಥುರಾ, ಥಾನೇಶ್ವರ್: ಪ್ರಾಥಮಿಕ ಪರಿಚಯ**

ಭಾರತದ ಮಧ್ಯದಲ್ಲಿ ಕನೌಜ್ ಅನ್ನು ಸುತ್ತುವರೆದ ದೇಶವಿದೆ, ಅದನ್ನು ಮಧ್ಯದೇಶವೆಂದು ಕರೆಯುತ್ತಾರೆ. ಭೌಗೋಳಿಕವಾಗಿ ಇದು ಮಧ್ಯದಲ್ಲಿದೆ ಅಂದರೆ ಕೇಂದ್ರ ಸ್ಥಾನದಲ್ಲಿ ಇದೆ. ಹೇಗೆಂದರೆ ಇದು ಸಮುದ್ರ ಮತ್ತು ಪರ್ವತಗಳ ಮಧ್ಯದಲ್ಲಿ ನೆಲೆಗೊಂಡಿದೆ, ಉಷ್ಣ ಮತ್ತು ಶೀತ ಪ್ರದೇಶಗಳಿಗೂ ಇದು ಮಧ್ಯದಲ್ಲಿದೆ. ಹಾಗು, ಪೂರ್ವ ಮತ್ತು ಪಶ್ಚಿಮದ ಗಡಿಗಳ ಮಧ್ಯದಲ್ಲಿಯೂ ಇದೆ. ಎಲ್ಲದರ

ಜೊತೆಗೆ ಇದು ರಾಜಕೀಯ ಕೇಂದ್ರವೂ ಹೌದು. ಏಕೆಂದರೆ ಹಿಂದೊಂದು ಕಾಲದಲ್ಲಿ ಇದು ಅವರ ಸುಪ್ರಸಿದ್ಧ ವೀರರು ಮತ್ತು ರಾಜರ ಆವಾಸವಾಗಿತ್ತು.

ಸಿಂಧ್ ದೇಶವು ಕನೌಜಿನ ಪಶ್ಚಿಮದಲ್ಲಿದೆ. ನಮ್ಮ ದೇಶದಿಂದ ಸಿಂಧ್‌ಗೆ ನಡೆಯುತ್ತಾ ಹೊರಟರೆ ನಾವು ನಿಮ್ರೋಜ್ ದೇಶದಿಂದ ಆರಂಭಿಸುತ್ತೇವೆ, ಅಂದರೆ ಸಿಜಿಸ್ತಾನದಿಂದ. ಹಿಂದ/ಇಂಡಿಯ ದೇಶಕ್ಕೆ ಪಯಣ ಮಾಡುವಾಗ ನಾವು ಕಾಬೂಲಿನ ಬದಿಯಿಂದ ಆರಂಭಿಸುತ್ತೇವೆ. ಆದರೆ ಈ ಪಯಣಕ್ಕೆ ಅದೊಂದೆ ಮಾರ್ಗವಲ್ಲ. ಮಾರ್ಗಮಧ್ಯದ ಅಡತಡೆಗಳನ್ನು ನಿವಾರಿಸಿಕೊಂಡಿರಾದರೆ ಭಾರತವನ್ನು ನೀವು ಎಲ್ಲ ಕಡೆಯಿಂದಲೂ ಪ್ರವೇಶಿಸಬಹುದು. ಭಾರತದ ಪಶ್ಚಿಮಕ್ಕೆ ಸೀಮಾರೇಖೆಯಂತಿರುವ ಪರ್ವತ ಪ್ರದೇಶದಲ್ಲಿ ಹಿಂದು ಬುಡಕಟ್ಟುಗಳ ಜನರಿದ್ದಾರೆ, ಅಥವಾ ಅವರಂತೆ ಕಾಣುವ ಜನರಿದ್ದಾರೆ, ಅವರು ದಂಗೆಕೋರ ಸ್ವಭಾವದ ಕ್ರೂರಿಗಳು. ಈ ಜನರು [ಈ ದಿಕ್ಕಿನಲ್ಲಿ] ಹಿಂದು ಜನಾಂಗವು ಎಲ್ಲಿಯವರೆಗೆ ವಿಸ್ತೃತಗೊಂಡಿದೆಯೋ ಆ ತುದಿಯವರೆಗೂ ಇದ್ದಾರೆ.

ಕನೌಜ್ ನಗರವು ಗಂಗೆಯ ಪಶ್ಚಿಮಕ್ಕೆ ಇದೆ. ಬಹಳ ದೊಡ್ಡ ನಗರ. ಆದರೆ ಅದರ ಬಹುತೇಕ ಭಾಗವು ಈಗ ಪಾಳುಬಿದ್ದು ನಿರ್ಜನವಾಗಿದೆ. ಏಕೆಂದರೆ ಈಗ ಅದರ ರಾಜಧಾನಿಯನ್ನು ಗಂಗೆಯ ಪೂರ್ವದಲ್ಲಿರುವ ಬಾರಿ ನಗರಕ್ಕೆ ಸ್ಥಳಾಂತರಿಸಲಾಗಿದೆ. ಈ ಎರಡು ನಗರಗಳ ನಡುವೆ ಮೂರರಿಂದ ನಾಲ್ಕು ದಿನಗಳ ಪಯಣದ [ಕಾಲ್ನಡಿಗೆ] ಅಂತರವಿದೆ.

ಕನೌಜ್(ಕನ್ಯಾಕುಬ್ಜ) ನಗರವು ಪಾಂಡುವಿನ ಮಕ್ಕಳಿಂದಾಗಿ ಪ್ರಸಿದ್ಧಿಯನ್ನು ಪಡೆದಿದ್ದರೆ ಮಥುರಾ ನಗರವು ವಾಸುದೇವನಿಂದಾಗಿ ಪ್ರಸಿದ್ಧವಾಗಿದೆ. ಈ ನಗರವು ಜಾವುನ್ (ಯಮುನೆ) ನದಿಯ ಪೂರ್ವದಲ್ಲಿದೆ. ಮಥುರೆ ಮತ್ತು ಕನೌಜ್ ನಡುವಿನ ಅಂತರವು 28 *ಫಾರ್ಸಖ್*.

ಥಾನೇಶ್ವರ್ (ಸ್ಥಾನೇಶ್ವರ) ನಗರವು ಎರಡು ನದಿಗಳ ನಡುವೆ ಇದೆ, ಕನೌಜ್ ಮತ್ತು ಮಥುರಾ ನಗರಗಳ ಉತ್ತರದಲ್ಲಿದೆ. ಥಾನೇಶ್ವರವು ಕನೌಜಿನಿಂದ 80 ಫಾರ್ಸಖ್ ದೂರದಲ್ಲಿದ್ದರೆ, ಮಥುರೆಯಿಂದ 50 ಫಾರ್ಸಖ್ ದೂರದಲ್ಲಿದೆ.

ಗಂಗಾನದಿಯು ಹಿಂದೆ ಉಲ್ಲೇಖಿಸಿದ ಪರ್ವತಶ್ರೇಣಿಯಲ್ಲಿ ಉದ್ಭವಗೊಂಡಿದೆ. ಈ ನದಿಯ ಮೂಲವನ್ನು ಗಂಗಾದ್ವಾರವೆಂದು ಕರೆಯುತ್ತಾರೆ. ಈ ದೇಶದ ಹೆಚ್ಚಿನ ನದಿಗಳು ಈ ಪರ್ವತಶ್ರೇಣಿಯಿಂದಲೇ ಉದ್ಭವಗೊಂಡಿವೆ, ಅದನ್ನು ಕುರಿತು ಹಿಂದೆಯೆ ಸೂಕ್ತ ಜಾಗದಲ್ಲಿ ಉಲ್ಲೇಖಿಸಲಾಗಿದೆ.

**ದೂರವನ್ನು ಅಳೆಯಲು ಹಿಂದುಗಳು ಬಳಸುವ ವಿಧಾನ**

ಭಾರತದ ವಿವಿಧ ಭಾಗಗಳ ನಡುವಿನ ಅಂತರಗಳಿಗೆ ಸಂಬಂಧಿಸಿದಂತೆ, ಅವುಗಳನ್ನು ಸ್ವತಃ ನೋಡದೇ ಇರುವವರು ಸಂಪ್ರದಾಯವನ್ನು ಆಶ್ರಯಿಸಬೇಕಾಗುತ್ತದೆ. ಆದರೆ ದುರದೃಷ್ಟವಶಾತ್,

ಅವರ ಸಂಪ್ರದಾಯ [ಅಂತರವನ್ನು ಅಳೆಯುವ ವಿಧಾನ] ಹೇಗಿದೆಯೆಂದರೆ, ಟಾಲೆಮಿ ಕೂಡ ಈ ವಿಧಾನದ ಪ್ರಸಾರಕರನ್ನು ಮತ್ತು ಕತೆ ಹೇಳುವುದನ್ನು ಕುರಿತ ಅವರ ಒಲವನ್ನು ಕುರಿತು ನಿರಂತರವಾಗಿ ಅಕ್ಷೇಪಿಸುತ್ತಲೆ ಬಂದಿದ್ದಾನೆ. ಅದೃಷ್ಟವಶಾತ್, ಅವರ ಸುಳ್ಳುಗಳನ್ನು ನಿಯಂತ್ರಿಸುವ ನಿಯಮವೊಂದನ್ನು ನಾನು ಕಂಡುಕೊಂಡಿದ್ದೇನೆ. ಹಿಂದುಗಳು ಒಂದು ಎತ್ತು ಹೊರುವ ಭಾರವನ್ನು 2000 ಮತ್ತು 3000 ಮಣ ಎಂದು ಅಂದಾಜು ಹಾಕುತ್ತಾರೆ (ಅದು ಎತ್ತು ಒಂದು ಸಲಕ್ಕೆ ಹೊರಬಹುದಾದ ಭಾರದ ಎಷ್ಟೋ ಪಟ್ಟು ಹೆಚ್ಚು). ಅದರ ಪರಿಣಾಮವಾಗಿ ಎತ್ತಿನ ಬಂಡಿಯನ್ನು ಅವರು ಅನೇಕ ದಿನಗಳವರೆಗೆ ಹಿಂದೆ-ಮುಂದೆ ಓಡಾಡಿಸುತ್ತಾರೆ. ಎಲ್ಲಿಯವರೆಗೆ ಎಂದರೆ ಎತ್ತು ತನಗೆ ನಿಗದಿ ಮಾಡಿದ ಇಡೀ ಭಾರವನ್ನು ಮಾರ್ಗದ ಒಂದು ಆರಂಭದಿಂದ ಇನ್ನೊಂದರವರೆಗೆ ಸಾಗಿಸುವ ತನಕ. ನಂತರ ಎರಡು ಜಾಗಗಳ ನಡುವಿನ ದೂರವನ್ನು ಒಟ್ಟೂ ಇಷ್ಟು ದಿನಗಳ ನಡಿಗೆ ಎಂದು ಲೆಕ್ಕ ಹಾಕುತ್ತಾರೆ. ಅದು ಎತ್ತಿನ ಬಂಡಿಯು ಸಾಗಿದ ಒಟ್ಟೂ ದಿನಗಳ ಲೆಕ್ಕ. ಹಿಂದುಗಳ ಈ ಬಗೆಯ ಲೆಕ್ಕಾಚಾರವನ್ನು ಬಹಳ ಶ್ರಮವಹಿಸಿ, ಎಚ್ಚರಿಕೆಯಿಂದ ಸ್ವಲ್ಪ ಮಟ್ಟಿಗೆ ಸರಿ ಪಡಿಸಬಹುದು ಮಾತ್ರ. ಆದರೂ ನಮಗೆ ಗೊತ್ತಿಲ್ಲವೆಂಬ ಕಾರಣಕ್ಕೆ ಗೊತ್ತಿರುವುದನ್ನು ಅದುಮಿಕೊಳ್ಳಲು ನಮ್ಮಿಂದ ಸಾಧ್ಯವಾಗಲಿಲ್ಲ. ಎಲ್ಲಾದರೂ ತಪ್ಪಾಯಿತು ಎನಿಸಿದರೆ ನಮ್ಮನ್ನು ಕ್ಷಮಿಸಿ ಎಂದು ಓದುಗರಲ್ಲಿ ವಿನಂತಿಸಿಕೊಳ್ಳುತ್ತಿದ್ದೇವೆ.

**ಕನೌಜಿನಿಂದ ಪ್ರಯಾಗದ (ಅಲಹಾಬಾದ್) ವೃಕ್ಷದವರೆಗೆ ಮತ್ತು ಪೂರ್ವ ತೀರ**

ಕನೌಜಿನಿಂದ ದಕ್ಷಿಣದತ್ತ ಸಾಗುವ ವ್ಯಕ್ತಿಯೊಬ್ಬನು ಯುಮುನಾ ಮತ್ತು ಗಂಗಾ ನದಿಯ ನಡುವೆ ಈ ಮುಂದಿನ ಪ್ರಸಿದ್ಧ ಜಾಗಗಳ ಮೂಲಕ ಸಾಗುತ್ತಾನೆ: ಜಜ್ಮಾವ್, ಕನೌಜ್‌ನಿಂದ 12 ಫರ್ಸಾಖ್, ಒಂದು ಫರ್ಸಾಖ್ ಅಂದರೆ ನಾಲ್ಕು ಮೈಲಿ ಅಥವಾ ಒಂದು ಕುರೋಹ್; ಅಭಾಪುರಿ, 8 ಫರ್ಸಾಖ್; ಕುರಹಾ, 8 ಫರ್ಸಾಖ್; ಬರಹಮ್‌ಶಿಲ್, 8 ಫರ್ಸಾಖ್; ಪ್ರಯಾಗದ ವೃಕ್ಷ, 12 ಫರ್ಸಾಖ್. ಪ್ರಯಾಗದಲ್ಲಿ ಯಮುನಾ ನದಿಯು ಗಂಗಾನದಿಯನ್ನು ಕೂಡುತ್ತದೆ, ಇಲ್ಲಿ ಹಿಂದುಗಳು ನಾನಾ ಬಗೆಯಲ್ಲಿ ತಮಗೆ ತಾವೆ ಹಿಂಸಿಸಿಕೊಳ್ಳುತ್ತಾರೆ, ಇದನ್ನು ಕುರಿತು ಧಾರ್ಮಿಕ ಮತಪಂಥಗಳು ಎಂಬ ವಿಭಾಗದಲ್ಲಿ ವರ್ಣಿಸಲಾಗಿದೆ. ಪ್ರಯಾಗದಿಂದ ಗಂಗಾ ನದಿಯು ಸಮುದ್ರವನ್ನು ಸೇರುವ ಜಾಗದ ದೂರವು 12 ಫರ್ಸಾಖ್.

ದೇಶದ ಇತರ ಕ್ಷೇತ್ರಗಳು ಪ್ರಯಾಗದ ವೃಕ್ಷದಿಂದ ದಕ್ಷಿಣಕ್ಕೆ ಹೋದಂತೆ ಸಮುದ್ರ ತೀರದವರೆಗೆ ಹರಡಿಕೊಂಡಿವೆ. ಪ್ರಯಾಗದಿಂದ 12 ಫರ್ಸಾಖ್ ದೂರದಲ್ಲಿ ಅರ್ಕು ತೀರ್ಥವಿದೆ; ಪ್ರಯಾಗದಿಂದ 40 ಫರ್ಸಾಖ್ ದೂರದಲ್ಲಿ ಉವರ್ಯಹಾರ್ ಇದೆ; 50 ಫರ್ಸಾಖ್ ದೂರದಲ್ಲಿ ಉರ್ದಬೀಶಾವ್ ಇದೆ.

ಅಲ್ಲಿಂದ ಪೂರ್ವ ಕಡಲ ತೀರದ ಹಾದಿಯಲ್ಲಿ ಇರುವ ದೇಶಗಳು ಈಗ ಜಾವುರ್ ಜನರ ಆಳ್ವಿಕೆಗೆ ಒಳಪಟ್ಟಿವೆ; ಮೊದಲಿಗೆ ದರಾವುರ್, ಉರ್ದಬೀಶಾವ್ ನಿಂದ 40 ಫರ್ಸಾಖ್ ದೂರದಲ್ಲಿದೆ; ಕಾಂಜಿ, 30

ಫರ್ಸಾಖ್ ದೂರದಲ್ಲಿದೆ; ಮಲಯ, 40 ಫರ್ಸಾಖ್ ದೂರದಲ್ಲಿದೆ; ಕೂಂಕ್, 30 ಫರ್ಸಾಖ್ ದೂರದಲ್ಲಿದೆ. ಕೂಂಕ್ ಈ ದಿಕ್ಕಿನಲ್ಲಿ ಜಾವುರ್ ಆಳ್ವಿಕೆಯ ಕೊಟ್ಟ ಕೊನೆಯ ಆಡಳಿತ ಪ್ರದೇಶವಾಗಿದೆ.

**ಬಾರಿಯಿಂದ ಗಂಗೆಯ ಮುಖಜ ಭೂಮಿಯವರೆಗೆ**

ಬಾರಿಯಿಂದ ಗಂಗಾನದಿಯ ಪೂರ್ವ ತಟದ ಬದಿಯಲ್ಲಿ ನಡೆಯುತ್ತ ಹೊರಟರೆ ನೀವು ಈ ಮುಂದಿನ ನಿಲ್ದಾಣಗಳನ್ನು ಹಾದು ಹೋಗುವಿರಿ: ಅಜೋದಹ (ಅಯೋಧ್ಯಾ, ಔಧ್), ಇದು ಬಾರಿಯಿಂದ 25 ಫರ್ಸಾಖ್ ದೂರದಲ್ಲಿದೆ; ಸುಪ್ರಸಿದ್ಧ ಬನಾರಸಿ ನಗರವು 20 ಫರ್ಸಾಖ್ ದೂರದಲ್ಲಿದೆ. ಅಲ್ಲಿಂದ ದಿಕ್ಕನ್ನು ಬದಲಾಯಿಸಿ ದಕ್ಷಿಣದ ಬದಲಿಗೆ ಪೂರ್ವದತ್ತ ಹೊರಟರೆ ನೀವು ಬನಾರಸಿಯಿಂದ 35 ಫರ್ಸಾಖ್ ದೂರದಲ್ಲಿರುವ ಶರ್ವಾರ್ ಎಂಬ ನಗರಕ್ಕೆ ಬರುವಿರಿ; ಬನಾರಸಿಯಿಂದ 15 ಫರ್ಸಾಖ್ ದೂರದಲ್ಲಿ ಮುಂಗೀರೀ ಇದೆ; 30 ಫರ್ಸಾಖ್ ದೂರದಲ್ಲಿ ಜನ್ಪಾ ಇದೆ; ದೂಗುಂಪುರ್ 50 ಫರ್ಸಾಖ್ ದೂರದಲ್ಲಿದೆ; 30 ಫರ್ಸಾಖ್ ದೂರದಲ್ಲಿ ಗಂಗಾಸಾಯರ ಇದೆ; ಇಲ್ಲಿ ಗಂಗೆಯು ಸಮುದ್ರವನ್ನು ಸೇರುತ್ತದೆ.

**ಕನೌಜಿನಿಂದ ನೇಪಾಲ, ಮತ್ತು ಭೂತೇಶ್ವರ್**

ಕನೌಜಿನಿಂದ ಪೂರ್ವದತ್ತ ನಡೆಯುವಾಗ ನೀವು ಬಾರಿ ನಗರಕ್ಕೆ ಬರುವಿರಿ, ಅದು ಕನೌಜಿನಿಂದ 10 ಫರ್ಸಾಖ್ ದೂರದಲ್ಲಿದೆ; ದೂಗುಂ 45 ಫರ್ಸಾಖ್ ದೂರದಲ್ಲಿದೆ; ಶಿಲಾಹಟ್ ಸಾಮ್ರಾಜ್ಯವು 10 ಫರ್ಸಾಖ್ ದೂರದಲ್ಲಿದೆ; ಬಿಹಾತ್ ನಗರವು 12 ಫರ್ಸಾಖ್ ದೂರದಲ್ಲಿದೆ. ಅಲ್ಲಿಂದ ಬಲಕ್ಕೆ ತಿರುಗಿದರೆ ತಿಲ್‌ವತ್ ದೇಶವಿದೆ, ತರೂ ಜನರು ಇಲ್ಲಿಯ ನಿವಾಸಿಗಳು. ಇವರು ಕಪ್ಪು ವರ್ಣದವರು ಮತ್ತು ಚಪ್ಪಟೆ ಮೂಗಿನವರು, ತುರ್ಕರಂತೆ ಕಾಣುತ್ತಾರೆ. ಅಲ್ಲಿಂದ ಕಾಮ್ರೂ ಪರ್ವತ ಶ್ರೇಣಿಯತ್ತ ಬರುವಿರಿ, ಇದು ಸಮುದ್ರದವರೆಗೆ ವ್ಯಾಪಿಸಿಕೊಂಡಿದೆ.

ತಿಲ್‌ವತ್ ನ ವಿರುದ್ಧ ದಿಕ್ಕಿನ ಎಡಕ್ಕೆ ನೇಪಾಲವಿದೆ. ಆ ದೇಶಗಳನ್ನು ತಿರುಗಿ ಬಂದ ಯಾತ್ರಿಕನೊಬ್ಬ ನನಗೆ ಈ ವರದಿಯನ್ನು ನೀಡಿದ:-"ತನ್‌ವತ್ ನಲ್ಲಿ ಆತ ಪೂರ್ವದಿಕ್ಕಿನಿಂದ ಆರಂಭಿಸಿ ಎಡಕ್ಕೆ ತಿರುಗಿ 20 ಫರ್ಸಾಖ್ ದೂರದ ನೇಪಾಲದತ್ತ ನಡೆದ. ಈ ದಾರಿಯಲ್ಲಿ ಹೆಚ್ಚಿನದಾಗಿ ಏರುತ್ತಲೆ ಹೋಗಬೇಕು. ಹಾಗೆ ಕ್ರಮಿಸುತ್ತ ಮೂವತ್ತು ದಿನಗಳಲ್ಲಿ ಆತ ಭೂತೇಶ್ವರ್ ತಲುಪಿದ. ಹೆಚ್ಚು ಕಡಿಮೆ 80 ಫರ್ಸಾಖ್ ದೂರದಲ್ಲಿರುವ ಭೂತೇಶ್ವರಕ್ಕೆ ಇಳಿಯುವುದಕ್ಕಿಂತ ಏರುತ್ತಲೇ ಹೋಗಬೇಕು. ಈ ಹಾದಿಯಲ್ಲಿ ನೀರಿನ ತಾಣ [ನದಿ] ಸಿಗುತ್ತದೆಯಾದ್ದರಿಂದ ಬಹಳ ಸಲ ಅದನ್ನು ಮರದ ಹಲಗೆಯ ಸೇತುವೆಗಳ ಮೇಲೆ ದಾಟಬೇಕು. ಮರದ ಹಲಗೆಗಳನ್ನು ಬಿದಿರಿನ ಗಳಗಳಿಗೆ ಕಟ್ಟಿ ಮಾಡಿದ ಈ ಸೇತುವೆಗಳು ಈ ಕಡೆಯ ಕಲ್ಲಿನಿಂದ ಆ ಕಡೆ ಕಲ್ಲಿಗೆ ಕಟ್ಟಲ್ಪಟ್ಟಿರುತ್ತವೆ ಮತ್ತು ಕೆಲವೊಮ್ಮೆ ಇಕ್ಕೆಲಗಳಲ್ಲಿರುವ ಮೈಲಿಕಲ್ಲುಗಳಿಗೂ ಕಟ್ಟಲ್ಪಟ್ಟಿರುತ್ತವೆ. ಜನರು ಸಾಮಾನುಗಳ ಭಾರವನ್ನು ಭುಜದ ಮೇಲೆ ಹೊತ್ತು ಈ ಸೇತುವೆಗಳನ್ನು ದಾಟುತ್ತಾರೆ, ನೂರು ಗಜ ಕೆಳಗೆ ನೀರು ಹಿಮದ

ನೊರೆಯುಗುಳುತ್ತ ಬಂಡೆಗಲ್ಲುಗಳನ್ನೇ ಕೊಚ್ಚಿಕೊಂಡು ಹೋಗುವಷ್ಟು ರಭಸದಿಂದ ಹರಿಯುತ್ತಿರುತ್ತದೆ. ಸೇತುವೆಯ ಆಚೆಗೆ  ತಲುಪಿದ ನಂತರ ಮೈಮೇಲೆ ಹೊತ್ತು ತಂದ ಸಾಮಾನುಗಳನ್ನು ಆಡುಗಳ ಮೇಲೆ ಹೊರಿಸಿಕೊಂಡು ಒಯ್ಯಲಾಗುತ್ತದೆ.' ಎಂದು ಯಾತ್ರಿಕನು ವರದಿ ಮಾಡಿದ್ದ. ಅಲ್ಲದೆ ತಾನು ನಾಲ್ಕು ಕಣ್ಣುಗಳನ್ನು ಹೊಂದಿದ ಜಿಂಕೆಗಳನ್ನು ನೋಡಿದೆ ಎಂದೂ ಅವನು ವರದಿ ಮಾಡುತ್ತಾನೆ. ಅದು ದುರ್ದೈವವಶಾತ್ ಪ್ರಕೃತಿಯಿಂದಾದ ಪ್ರಮಾದವೇನೂ ಅಲ್ಲ, ಆ ಪ್ರಾಣಿ ಪ್ರಬೇಧವೇ ನೈಸರ್ಗಿಕವಾಗಿ ಆ ಸ್ವರೂಪದಲ್ಲಿದೆ ಎಂದು ಆತ ಹೇಳುತ್ತಾನೆ.

"ಭೂತೇಶ್ವರವು ಟಿಬೆಟ್ಟಿನ  ಆರಂಭದಲ್ಲೇ ಸಿಗುವ ಮೊದಲ ನಗರ. ಅಲ್ಲಿ ಭಾಷೆ, ಉಡುಗೆ, ಮತ್ತು ಜನರ ಮಾನವಶಾಸ್ತ್ರೀಯ ಚೆಹರೆಗಳೂ ಬದಲಾಗುತ್ತವೆ. ಅಲ್ಲಿಂದ ಆ ಜಾಗದಲ್ಲಿರುವ ಅತಿ ಎತ್ತರದ ಪರ್ವತದ ತುದಿಯನ್ನು ತಲುಪಲು 20 ಫರ್ಸಾಖ್ ಹತ್ತಬೇಕು. ಈ ಪರ್ವತ ತುದಿಯಿಂದ ನೋಡಿದರೆ ಕೆಳಗೆ ಮಂಜಿನ ಹೊದಿಕೆಯೊಳಗೆ ಕಪ್ಪು ಬಣ್ಣದಲ್ಲಿ ವ್ಯಾಪಿಸಿಕೊಂಡ ಭಾರತವು ಕಾಣುತ್ತದೆ. ಈ ಶಿಖರದ ಕೆಳಗೆ ಚಿಕ್ಕ ಬೆಟ್ಟಗಳಂತೆ ಪರ್ವತಗಳ ಸಾಲು ಕಾಣುತ್ತದೆ. ಇಲ್ಲಿಂದ ಟಿಬೆಟ್ ಮತ್ತು ಚೀನ ಕೆಂಪನೆಯ ಬಣ್ಣದಲ್ಲಿ ಗೋಚರವಾಗುತ್ತವೆ. ಇಲ್ಲಿಂದ ಇಳಿಯುತ್ತ ಹೋದರೆ ಟಿಬೆಟ್ ಮತ್ತು ಚೀನ ಒಂದು ಫರ್ಸಾಖ್‌ಗಿಂತ ಕಡಿಮೆ ದೂರದಲ್ಲಿ ಸಿಗುತ್ತವೆ."

**ಕನೌಜಿನಿಂದ ಬನವಾಸ್**

ಕನೌಜಿನಿಂದ ಆಗ್ನೆಯ ದಿಕ್ಕಿನತ್ತ ನಡೆದರೆ ಗಂಗೆಯ ಪಶ್ಚಿಮ ಬದಿಯಲ್ಲಿ ನಿಮಗೆ ಜಜಾಹುತಿ ಎಂಬ ದೇಶವು ಸಿಗುತ್ತದೆ, ಇದು ಕನೌಜಿನಿಂದ 30 ಫರ್ಸಾಖ್ ದೂರದಲ್ಲಿದೆ. ಕಜುರಾಹ ಎಂಬುದು ಅದರ ರಾಜಧಾನಿಯಾಗಿದೆ. ಈ ನಗರ ಮತ್ತು ಕನೌಜಿನ ನಡುವೆ ಭಾರತದ ಎರಡು ಸುಪ್ರಸಿದ್ಧ ಕೋಟೆಗಳಿವೆ - ಗ್ವಾಲಿಯರ್ ಮತ್ತು ಕಾಲಂಜರ್. ದಹಾಲ [--ಫರ್ಸಾಖ್) ಎಂಬ ದೇಶದ ರಾಜಧಾನಿ ತಿವುರಿ, ಮತ್ತು ಈಗ ಗಾಂಗೇಯನೆಂಬವನು ಅದರ ಅರಸನಾಗಿದ್ದಾನೆ.ಕನ್ನಕಾರ ಕ್ಷೇತ್ರವು ಕನೌಜಿನಿಂದ 20 ಫರ್ಸಾಖ್ ದೂರದಲ್ಲಿದೆ. ಅಪ್ಸೂರ್, ಬನವಾಸ್ ಕಡಲ ದಂಡೆಯಲ್ಲಿದೆ.

**ಕನೌಜಿನಿಂದ ಬಝಾನ**

ಕನೌಜ್‌ನಿಂದ ನೈರುತ್ಯದತ್ತ ನಡೆದು ಬಂದರೆ 18 ಫರ್ಸಾಖ್ ದೂರದಲ್ಲಿ ಆಸಿ ಎಂಬ ನಗರ ಸಿಗುತ್ತದೆ; 17 ಫರ್ಸಾಖ್ ದೂರದಲ್ಲಿ ಸಹನ್ಯಾ ನಗರ; 18 ಫರ್ಸಾಕ್ ದೂರದಲ್ಲಿ ಜಂಧ್ರಾ; 15 ಫರ್ಸಾಖ್ ದೂರದಲ್ಲಿ ರಾಜೂರಿ; 20 ಫರ್ಸಾಖ್ ದೂರದಲ್ಲಿ ಗುಜರಾತಿನ ರಾಜಧಾನಿ ಬಝಾನ ಸಿಗುತ್ತದೆ. ಈ ನಗರವನ್ನು ನಮ್ಮ ಜನ ನಾರಾಯನ್  ಎಂದು ಕರೆಯುತ್ತಾರೆ. ಈ ನಗರವು ಪಾಳುಬಿದ್ದ ನಂತರ ಅದರ ವಾಸಿಗಳು ಜದೂರ (?) ಎಂಬ ನಗರಕ್ಕೆ ವಲಸೆ ಹೋದರು.

**ಮಥುರಾದಿಂದ ಧಾರ್ [ಧಾರಾ]**

ಮಥುರಾದಿಂದ ಕನೌಜಿಗೆ ಇರುವ ಅಂತರವು ಕನೌಜಿನಿಂದ ಬಝಾನಕ್ಕೆ ಇರುವಷ್ಟೇ ಇದೆ, ಅಂದರೆ 28 ಫರ್ಸಾಖ್. ಮಥುರೆಯಿಂದ ಉಜ್ಜೈನಿಗೆ ನಡೆದುಕೊಂಡು ಹೋಗುವ ಮಾರ್ಗದಲ್ಲಿ ಕೇವಲ ಐದು ಫರ್ಸಾಖ್ ಅಂತರವನ್ನಷ್ಟೇ ಹೊಂದಿದ ಹಳ್ಳಿಗಳು ಸಿಗುತ್ತವೆ, ಅವು ಪರಸ್ಪರ ಬಹಳ ಹತ್ತಿರದಲ್ಲೇ ಇವೆ. 35 ಫರ್ಸಾಖ್‌ನಷ್ಟು ನಡೆದ ನಂತರ ದೂದಾಹೀ ಎಂಬ ಒಂದು ದೊಡ್ಡ ಹಳ್ಳಿಗೆ ಬರುತ್ತೀರಿ; ದೂದಾಹೀಯಿಂದ 17 ಫರ್ಸಾಖ್ ದೂರದಲ್ಲಿರುವ ಬಾಮಹೂರ್ ಪಟ್ಟಣ ಸಿಗುತ್ತದೆ. ನಂತರ 5 ಫರ್ಸಾಖ್ ದೂರದಲ್ಲಿ ಹಿಂದುಗಳಲ್ಲಿ ಸುಪ್ರಸಿದ್ಧವಾಗಿರುವ ಬೈಲಸಾನ್ ಎಂಬ ನಗರ ಸಿಗುತ್ತದೆ. ಈ ನಗರದ ಹೆಸರು ಅಲ್ಲಿಯ ಜನರು ಪೂಜಿಸುವ ಮೂರ್ತಿಯ ಹೆಸರೇ ಆಗಿದೆ. ಅಲ್ಲಿಂದ ಅರ್ದೀನ್‌ಗೆ 9 ಫರ್ಸಾಖ್. ಇಲ್ಲಿ ಪೂಜಿಸಲ್ಪಡುವ ಮೂರ್ತಿಯು ಮಹಾಕಾಲ. ಅಲ್ಲಿಂದ ಧಾರ್ 7 ಫರ್ಸಾಖ್.

**ಬಝಾನಾದಿಂದ ಮಂದಗಿರ್**

ಬಝಾನದಿಂದ ದಕ್ಷಿಣದತ್ತ ಸಾಗಿದರೆ ಬಝಾನದಿಂದ 25 ಫರ್ಸಾಖ್ ದೂರದಲ್ಲಿರುವ ಮೈವಾರ್ ನಗರಕ್ಕೆ ಬರುವಿದಿರ. ಈ ರಾಜಾಧಿಪತ್ಯದ ರಾಜಧಾನಿಯು ಜತ್ತರಾರ್. ಈ ನಗರದಿಂದ ಮಾಲವ ದೇಶಕ್ಕೆ ಬರುವಿರಿ, ಇದರ ರಾಜಧಾನಿಯು ಧಾರ್. ಇದು 20 ಫರ್ಸಾಖ್ ದೂರದಲ್ಲಿದೆ. ಇಲ್ಲಿ, ಧಾರ್‌ನ ಪೂರ್ವಕ್ಕೆ 7 ಫರ್ಸಾಖ್ ದೂರದಲ್ಲಿ ಉಜ್ಜೈನಿ ಇದೆ,.

ಉಜ್ಜೈನಿಯಿಂದ ಮಾಲವ ದೇಶಕ್ಕೇ ಸೇರಿದ ಬೈಲ್‌ಸಾನ್ 10 ಫರ್ಸಾಖ್ ದೂರದಲ್ಲಿದೆ.

ಧಾರ್‌ನಿಂದ ದಕ್ಷಿಣಕ್ಕೆ ನಡೆಯುತ್ತ ಹೋದರೆ ನಿಮಗೆ 20 ಫರ್ಸಾಖ್ ದೂರದಲ್ಲಿ ಭೂಮಿಹಾರವೆಂಬ ನಗರ ಸಿಗುತ್ತದೆ; ಕಾಂದ್ 20 ಫರ್ಸಾಖ್ ದೂರದಲ್ಲಿದೆ; ನರ್ಮದಾ (ನರ್ಬುದಾ) ನದಿಯ ತಟದಲ್ಲಿರುವ ನಾಮವುರ್ 10 ಫರ್ಸಾಖ್ ದೂರದಲ್ಲಿದೆ; ಅಲೀಸ್ಪುರ್ 20 ಫರ್ಸಾಖ್ ದೂರದಲ್ಲಿದೆ; ಗೋದಾವರಿ ನದಿಯ ತಟದಲ್ಲಿರುವ ಮಂದಗಿರ್ 60 ಫರ್ಸಾಖ್ ದೂರದಲ್ಲಿದೆ.

**ಧಾರಾನಗರಿಯಿಂದ ಥಾನಾ**

ಧಾರಾ ನಗರಿಯಿಂದ ಮತ್ತೆ ದಕ್ಷಿಣದತ್ತ ಸಾಗಿದರೆ 7 ಫರ್ಸಾಖ್ ದೂರದಲ್ಲಿ ನಮಿಯ್ಯಾ ಎಂಬ ಕಣಿವೆ ಸಿಗುತ್ತದೆ; ಮರಾಠ ದೇಶವು 18 ಫರ್ಸಾಖ್ ದೂರದಲ್ಲಿದೆ; 25 ಫರ್ಸಾಖ್ ದೂರದಲ್ಲಿ ಕೊಂಕಣ ರಾಜ್ಯವಿದೆ. ಕಡಲ ತೀರದ ಈ ರಾಜ್ಯಕ್ಕೆ ಥಾನಾ ಎಂಬ ರಾಜಧಾನಿ.

**ಭಾರತದ ಪ್ರಾಣಿಗಳನ್ನು ಕುರಿತ ಟಿಪ್ಪಣಿಗಳು**

ಕೊಂಕಣದ ದಾನಕ್ ಎಂಬ ಪ್ರದೇಶದಲ್ಲಿ ಶರವ (ಸಂಸ್ಕೃತದಲ್ಲಿ ಶರಭ) ಎಂಬ ಪ್ರಾಣಿ ಕಂಡುಬರುತ್ತದೆ. ಈ ಪ್ರಾಣಿಗೆ ನಾಲ್ಕು ಕಾಲುಗಳಿವೆ, ಮತ್ತು ಅದರ ಬೆನ್ನ ಮೇಲೆ ಮುಖ ಮೇಲೆ ಮಾಡಿದ ನಾಲ್ಕು ಪಾದಗಳ ರೀತಿ ಕಾಣುವ ಗುರುತು ಇರುತ್ತದೆ. ಅದಕ್ಕೆ ಸಣ್ಣ ಸೊಂಡಿಲು (ನೀಳ ಮೂಗು) ಮತ್ತು ಎರಡು ದೊಡ್ಡ ಕೋಡುಗಳಿರುತ್ತವೆ. ಆ ಕೋಡುಗಳಿಂದ ಆನೆಗಳ ಮೇಲೆ ದಾಳಿ

ಮಾಡಿ ಅವುಗಳನ್ನು ಸೀಳಿ ಹಾಕಬಲ್ಲುದು. ಅದರ ಬಾಹ್ಯಾಕಾರವು ಎಮ್ಮೆಯ ಸ್ವರೂಪದಲ್ಲಿರುತ್ತದೆ, ಆದರೆ ಘೆಂಡಾಮೃಗಕ್ಕಿಂತಲೂ (ರೈನೊ) ದೊಡ್ಡದಿರುತ್ತದೆ. ಜನಪ್ರಿಯ ಕತೆಗಳ ಪ್ರಕಾರ ಅದು ಕೆಲವೊಮ್ಮೆ ತನ್ನ ಕೋಡುಗಳಿಂದ ಪ್ರಾಣಿಗಳನ್ನು ತಿವಿದು ಆ ಪ್ರಾಣಿಯ ಭಾಗವನ್ನು ತನ್ನ ಬೆನ್ ಮೇಲೆ ಎಳೆದುಕೊಳ್ಳುತ್ತದೆ. ಅಲ್ಲಿ ಸತ್ತ ಪ್ರಾಣಿಯನ್ನು ಇಟ್ಟುಕೊಳ್ಳುತ್ತದೆ. ನಂತರ ಸತ್ತ ಪ್ರಾಣಿಯು ಕೊಳೆತು ನಾರುವ ಹುಳುಗಳ ರಾಶಿಯಾಗಿ ಶರಭದ ಹಿಂದಿನ ಭಾಗದವರೆಗೂ ಆಕ್ರಮಿಸಿಕೊಳ್ಳುತ್ತದೆ. ಅದರ ಪರಿಣಾಮವಾಗಿ ಶರಭವು ಮರ ಕಂಡರೆ ಅವುಗಳ ಬೊಡ್ಡೆಗೆ ತನ್ನ ಮೈಯ್ಯನ್ನು ತುರಿಸಿಕೊಳ್ಳುತ್ತದೆ, ಕೊನೆಗೆ ಅವು ನಾಶವಾಗುತ್ತವೆ. ಇದೇ ಪ್ರಾಣಿಯು ಗುಡುಗಿನ ಸದ್ದನ್ನು ಆಲಿಸಿ ಅದು ಯಾವುದೋ ಪ್ರಾಣಿ ಎಂದು ಕಲ್ಪಿಸಿಕೊಂಡು ಆ ಕಾಲ್ಪನಿಕ ಶತ್ರುವಿನ ಮೇಲೆ ಎರಗಲು ಹೋಗುತ್ತದೆ ಎಂದು ಜನರು ಕತೆ ಹೇಳುತ್ತಾರೆ. ಆ ಶತ್ರುವನ್ನು ಹಿಂಬಾಲಿಸಿ ಅದು ಪರ್ವತ ಶಿಖರಗಳ ತುದಿಯವರೆಗೂ ಹೋಗುತ್ತದೆ ಮತ್ತು ಅಲ್ಲಿಂದ ತನ್ನ ಶತ್ರುವಿನ ಮೇಲೆ ಜಿಗಿಯುತ್ತಿದ್ದೇನೆ ಎಂದು ಭಾವಿಸಿ ಜಿಗಿಯುತ್ತದೆ. ಕೊನೆಗೆ ಪರ್ವತ ಕಣಿವೆಯೊಳಗೆ ಬಿದ್ದು ಅಸುನೀಗುತ್ತದೆ ಎಂದು ಜನ ಹೇಳುತ್ತಾರೆ.

ಗಂಡಾಮೃಗಗಳು ಭಾರತದಲ್ಲಿ ಹೇರಳವಾಗಿವೆ, ವಿಶೇಷವಾಗಿ ಗಂಗಾನದಿ ಪ್ರದೇಶದಲ್ಲಿ. ನೋಡಲು ಎಮ್ಮೆಯ ಹಾಗೆ ಕಾಣುತ್ತದೆ, ಕಪ್ಪನೆಯ ಹೊಪ್ಪಳಿಕೆ ಎದ್ದಂತಿರುವ ಚರ್ಮ, ಗಲ್ಲದ ಕೆಳಗೆ ನೇತಾಡುತ್ತದೆ. ಗಮಗೆದೊಗಲು ಇರುವ ಈ ಪ್ರಾಣಿಗೆ ಪ್ರತಿ ಪಾದದಲ್ಲಿಯೂ ಮೂರು ಹಳದಿ ಗೊರಸುಗಳಿರುತ್ತವೆ. ಅವುಗಳಲ್ಲಿ ದೊಡ್ಡದು ಮುಂದೆ ಇದ್ದರೆ ಉಳಿದೆರಡು ಅದರ ಅಕ್ಕಪಕ್ಕದಲ್ಲಿರುತ್ತವೆ. ಗಿಡ್ಡ ಬಾಲವಿರುತ್ತದೆ. ಕಣ್ಣುಗಳು ಇತರ ಪ್ರಾಣಿಗಳಿಗೆ ಇರುವಂತೆ ಕೆನ್ನೆಯ ಮೇಲಿರುವುದಿಲ್ಲ, ಕೆನ್ನೆಗಿಂತ ಕೆಳಗಿರುತ್ತವೆ. ಮೂಗಿನ ಮೇಲೆ ಒಂದು ಕೋಡು ಮೇಲ್ಮುಖವಾಗಿ ಬಾಗಿಕೊಂಡಿರುತ್ತದೆ. ಬ್ರಾಹ್ಮಣರು ಈ ಗಂಡಾಮೃಗದ ಮಾಂಸವನ್ನು ತಿನ್ನುವ ಸವಲತ್ತನ್ನು ಹೊಂದಿದ್ದಾರೆ. ಒಮ್ಮೆ ಒಂದು ಎಳೆಯ ಗಂಡಾಮೃಗವು ಒಂದು ಆನೆಯ ಮೇಲೆ ದಾಳಿ ಮಾಡಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆನೆಯ ಮೊಂದಿನ ಕಾಲಗಳ ಮೇಲೆ ಈ ಗಂಡಾಮೃಗವು ತನ್ನ ಕೋಡಿನಿಂದ ತಿವಿದು ಆನೆಯನ್ನು ಮುಖಡಿಯಾಗಿ ಬೀಳಿಸಿತ್ತು.

ಗಂಡಾಮೃಗವೆಂದರೆ ರೈನೋಸರಸ್ (ಕರ್ಕದನ್[3]) ಎಂದು ನಾನು ಅಂದುಕೊಂಡಿದ್ದೆ. ಆದರೆ ನಾವು ಕರ್ಕದನ್ ಎಂದು ಕರೆಯುವ ಪ್ರಾಣಿಯನ್ನು ನಿಗ್ರೊಗಳು ಇಂಪೀಲಾ ಎಂದು ಕರೆಯುತ್ತಾರೆ ಎಂದು ನಿಗ್ರೊಗಳ ನಾಡು ಸುಫಾಲಾಗೆ ಭೇಟಿ ಇತ್ತವನೊಬ್ಬ ಹೇಳಿದ್ದ. ರೈನೋಸರಸ್ ಗಿಂತ ಹೆಚ್ಚಾಗಿ, ನಾವು ನಮ್ಮ ಬಾಕುಗಳಿಗೆ ಹಾಕುವ ಹಿಡಿಕೆಯ ಪ್ರಾಣಿಗೆ ಈ ವರ್ಣನೆಯು ಹತ್ತಿರದಲ್ಲಿದೆ. ಅದು ಬೇರೆ ಬೇರೆ ಬಣ್ಣದಲ್ಲಿರುತ್ತದೆ. ತಲೆಯ ಮೇಲೆ ಶಂಕು ಆಕಾರದ ಒಂದು ಕೋಡು ಇರುತ್ತದೆ. ಅದು ಬುಡದಲ್ಲಿ

[3] ಇದು ಭಾರತ ಮತ್ತು ಪರ್ಶಿಯಾದ ಪೌರಾಣಿಕ ಪ್ರಾಣಿ. ಇದನ್ನು ಪರ್ಶಿಯನ್ ಭಾಷೆಯಲ್ಲಿ 'ರೈನೊಸರಸ್' ಎಂದು ಕರೆಯುತ್ತಾರೆ.

ಅಗಲವಿರುತ್ತದೆ, ಬಹಳ ಉದ್ದವೇನೋ ಇರುವುದಿಲ್ಲ. ಕೋಡಿನ ತುದಿಯ ಒಳಗೆ ಕಪ್ಪಾಗಿರುತ್ತದೆ, ಮತ್ತು ಉಳಿದೆಲ್ಲೆಡೆ ಬೆಳ್ಳಗಿರುತ್ತದೆ. ಮುಂದೆ ಅದಕ್ಕೆ ಮತ್ತೊಂದು ಅದೇ ರೀತಿಯ ಎರಡನೆಯ ಕೋಡು ಇರುತ್ತದೆ. ಅದು ಇನ್ನೊಂದು ಪ್ರಾಣಿಯನ್ನು ತಿವಿಯಲು ನೋಡುವಾಗ ನೆಟ್ಟಗಾಗುತ್ತದೆ. ಅದು ತನ್ನ ಕೋಡನ್ನು ಕಲ್ಲುಬಂಡೆಗಳಿಗೆ ಉಜ್ಜಿ ಹರಿತಗೊಳಿಸುತ್ತದೆ. ಆಗ ಮತ್ತೊಂದು ಪ್ರಾಣಿಯನ್ನು ಇರಿದು ಕತ್ತರಿಸಲು ಸಾಧ್ಯವಾಗುತ್ತದೆ. ಅದಕ್ಕೆ ಗೊರಸುಗಳಿರುತ್ತವೆ ಮತ್ತು ಕತ್ತೆಗೆ ಇರುವಂತೆ ಕೂದಲುಳ್ಳ ಬಾಲವಿರುತ್ತದೆ.

ನೈಲ್ ನದಿಯಲ್ಲಿ ಇರುವಂತೆ ಭಾರತದ ನದಿಗಳಲ್ಲಿ ಮೊಸಳೆಗಳಿರುತ್ತವೆ. ಅದರ ಕಾರಣದಿಂದಲೇ  ನದಿಗಳು ಮತ್ತು ಸಮುದ್ರ ತೀರದ ಸ್ವರೂಪವನ್ನು ಅರಿಯದೆ ಮುಗ್ಧ ಅಲ್‌ಜಾಹಿಜ್ ಮುಹ್ರಾನ್ (ಸಿಂಧ್) ನದಿಯು ನೈಲ್ ನದಿಯದ್ದೇ ಒಂದು ಶಾಖೆ ಎಂದು ತಪ್ಪು ತಿಳಿದಿದ್ದ. ಭಾರತದ ನದಿಗಳಲ್ಲಿ ಮೊಸಳೆಯದೆ ಜಾತಿಯ (ಮಕರ) ಇನ್ನೂ ಅದ್ಭುತವಾದ ಪ್ರಾಣಿಗಳಿವೆ. ವಿವಿಧ ಬಗೆಯ ಮೀನುಗಳಿವೆ. ಚರ್ಮದ ಚೀಲದಮತಹ ಪ್ರಾಣಿಯೊಂದಿದೆ. ಅದು ನೀರಿನಲ್ಲಿ ಈಜುತ್ತಾ ಆಟವಾಡುವಾಗ ಹಡಗಿನ ಪ್ರಯಾಣಿಕರಿಗೆ ಕಾಣಿಸಿಕೊಳ್ಳುತ್ತದೆ. ಅದನ್ನು ಬರ್ಲು (ಪೋರ್ಪೈಸ್?)ಎಂದು ಕರೆಯುತ್ತಾರೆ. ಅದು ಡಾಲ್ಫಿನ್ ಅಥವಾ ಡಾಲ್ಫಿನ್‌ನಂತಹ ಒಂದು ಪ್ರಾಣಿಯಾಗಿರಬಹುದು ಎಂದು ನನಗೆ ಅನಿಸುತ್ತದೆ. ಅದರ ತಲೆಯ ಮೇಲೆ ಡಾಲ್ಫಿನ್‌ಗೆ ಇರುವಂತೆ ಉಸಿರಾಡಲು ತೂತು (ಹೊಳ್ಳೆ) ಇರುತ್ತದೆ ಎಂದು ಜನ ಹೇಳುತ್ತಾರೆ.

ದಕ್ಷಿಣ ಭಾರತದ ನದಿಗಳಲ್ಲಿ ಗ್ರಾಹ, ಜಲತಂತು, ತಂದುವಾ ಎಂದೆಲ್ಲ ಕರೆಯುವ ಪ್ರಾಣಿಯೊಂದಿರುತ್ತದೆ. ಅದು ತೆಳ್ಳಗೆ ಉದ್ದವಿರುವ ಪ್ರಾಣಿ. ಅದು ನದಿಯೊಳಗೆ ಹೊಂಚು ಹಾಕಿಕೊಂಡು ಇರುತ್ತದೆ ಮತ್ತು ನದಿಯೊಳಗೆ ಇಳಿಯುವ ಹಾಗೂ ನಿಲ್ಲುವ ಮನುಷ್ಯರು ಅಥವಾ ಪ್ರಾಣಿಗಳ ಮೇಲೆ ದಾಳಿ ಮಾಡುತ್ತದೆ ಎಂದು ಜನರು ಹೇಳುತ್ತಾರೆ. ನೀರೊಳಗೆ ಇರುವ ಬೇಟೆಯ ಸುತ್ತ ಒಂದು ಅಂತರದಲ್ಲಿ ಅದು ಮೊದಲು ತಿರುಗುತ್ತದೆ, ತನ್ನ ದೇಹವು ಒಂದು ಸುತ್ತ ಬಂದ ನಂತರ ಅದು ಬೇಟೆಯ ಪಾದಗಳಿಗೆ ಗಂಟು ಹಾಕಿಕೊಳ್ಳುತ್ತದೆ. ಆಗ ಬೇಟೆಗೆ ಆಯ ತಪ್ಪಿ ನೀರೊಳಗೆ ಬಿದ್ದು, ಮುಳುಗುತ್ತ ಕಣ್ಮರೆಯಾಗುತ್ತದೆ. ಈ ಪ್ರಾಣಿಯನ್ನು ನೋಡಿದ ವ್ಯಕ್ತಿಯೊಬ್ಬ ನನಗೆ ಹೇಳಿದ್ದ. ಈ ಪ್ರಾಣಿಗೆ ನಾಯಿಯ ತಲೆ ಇರುತ್ತದೆ, ಅದರ ಬಾಲಕ್ಕೆ ಹಲವು ಸ್ಪರ್ಶಗ್ರಂಥಿಗಳಿರುತ್ತವೆ (ಗ್ರಹಣ ತಂತುಗಳು), ಅವುಗಳಿಂದ ಅದು ಬೇಟೆಯನ್ನು ಸುತ್ತುವರೆಯುತ್ತದೆ, ಒಂದೊಮ್ಮೆ ಬೇಟೆ ದುರ್ಬಲಗೊಂಡಿರದಿದ್ದರೆ. ಈ ಗ್ರಹಣ ತಂತುಗಳ ಮೂಲಕ ಅದು ಬೇಟೆಯನ್ನು ಬಾಲದೊಳಗೆ ಹಿಡಿದೆಳೆದುಕೊಳ್ಳುತ್ತದೆ, ಒಮ್ಮೆ ಸುತ್ತುವರೆದು ಗಟ್ಟಿಯಗಿ ಹಿಡಿಯಲ್ಪಟ್ಟ ನಂತರ ಪ್ರಾಣಿಯು ಮರೆಯಾಗಿಬಿಡುತ್ತದೆ.

ವಿಷಯಾಂತರವಾಯಿತು, ಈಗ ಮರಳಿ ನಮ್ಮ ವಿಷಯಕ್ಕೆ ಬರೋಣ.

**ಬಝೂನದಿಂದ ಸೋಮನಾಥ**

ಬಝೂನದಿಂದ ಆಗ್ನೇಯದತ್ತ ನಡೆಯುತ್ತ ಹೋದರೆ ನಿಮಗೆ 60 ಫರ್ಸಾಖ್ ದೂರದಲ್ಲಿ ಅನ್ಹಿಲ್ವಾರ ಸಿಗುತ್ತದೆ; 50 ಫರ್ಸಾಖ್ ದೂರದ ಕಡಲ ತೀರದಲ್ಲಿ  ಸೋಮನಾಥ ಸಿಗುತ್ತದೆ. ಅನ್ಹಿಲ್ವಾರದಿಂದ ಮತ್ತೆ ದಕ್ಷಿಣಕ್ಕೆ ನಡೆದರೆ ಲಾರ್ದೇಶ್ ಸಿಗುತ್ತದೆ. ಅದರ ಎರಡು ರಾಜಧಾನಿಗಳು, ಬಿಹ್ರೋಜ್ ಮತ್ತು ರಿಹಂಜೂರ್ ಸಿಗುತ್ತವೆ. ಇವೆರಡೂ ಥಾನಾದ ಪೂರ್ವದ ಕಡಲ ತೀರಕ್ಕೆ ಹೊಂದಿಕೊಂಡು ಅನ್ಹಿಲ್ವಾರದಿಂದ 42 ಫರ್ಸಾಖ್ ದೂರದಲ್ಲಿವೆ.

ಬಝೂನದಿಂದ ಪಶ್ಚಿಮಕ್ಕೆ ತಿರುಗಿದರೆ 50 ಫರ್ಸಾಖ್ ದೂರದಲ್ಲಿ ಮೂತಾನ್ ಸಿಗುತ್ತದೆ; 15 ಫರ್ಸಾಖ್ ದೂರದಲ್ಲಿ ಭಾತಿ ನಗರವಿದೆ.

ಭಾತಿಯಿಂದ ಆಗ್ನೇಯದತ್ತ ಸಾಗಿದರೆ  15 ಫರ್ಸಾಖ್ ದೂರದಲ್ಲಿ ನಿಮಗೆ ಅರೋರ್ ನಗರವು ಸಿಗುತ್ತದೆ. ಇದು ಸಿಂಧ್ ನದಿಯ ಎರಡು ಶಾಖೆಗಳ ನಡುವೆ ಇರುವ ನಗರವಾಗಿದೆ; 20 ಫರ್ಸಾಖ್ ದೂರದಲ್ಲಿ ಬಮ್ಹನುವ ಅಲ್ಮನಸುರ ನಗರವಿದೆ; 30 ಫರ್ಸಾಖ್ ದೂರದಲ್ಲಿ ಸಿಂಧ್ ನದಿಯ ಮುಖಜ ಭೂಮಿಯಲ್ಲಿ ಲೊಹ್‌ರಾನಿ ಇದೆ.

**ಕನೌಜಿನಿಂದ ಕಾಶ್ಮೀರ**

ಕನೌಜಿನಿಂದ ಉತ್ತರ ಮತ್ತು ವಾಯುವ್ಯದತ್ತ ನಡೆಯುತ್ತ ಹೋದರೆ ಕನೌಜಿನಿಂದ 50 ಫರ್ಸಾಖ್ ದೂರದಲ್ಲಿ ಶಿರ್ಶಾರಹ ಸಿಗುತ್ತದೆ; 18 ಫರ್ಸಾಖ್ ದೂರದಲ್ಲಿ ಪರ್ವತಗಳ ನಡುವೆ ಇರುವ ಪಿಂಜೌರ್ ಸಿಗುತ್ತದೆ; ಅದರ ವಿರುದ್ಧ ದಿಕ್ಕಿನ ತಪ್ಪಲಿನಲ್ಲಿ ಥಾನೇಶ್ವರ್ ಸಿಗುತ್ತದೆ; ಪರ್ವತಗಳ ಬುಡದಲ್ಲಿ 18 ಫರ್ಸಾಖ್ ದೂರದಲ್ಲಿ ಜಲಂಧರ್‌ನ ರಾಜಧಾನಿಯಾದ ದಮಾಲ ಸಿಗುತ್ತದೆ; 10 ಫರ್ಸಾಖ್ ದೂರದಲ್ಲಿ ಬಲ್ಲಾವರ್ ಸಿಗುತ್ತದೆ; ಅಲ್ಲಿಂದ ಪಶ್ಚಿಮದತ್ತ ತಿರುಗಿ ನಡೆಯುತ್ತ ಹೋದರೆ 13 ಫರ್ಸಾಖ್ ದೂರದಲ್ಲಿ ಲಡ್ಡಾ ಸಿಗುತ್ತದೆ; 8 ಫರ್ಸಾಖ್ ದೂರದಲ್ಲಿ ರಾಜಗಿರಿ ಕೋಟೆ; ಅಲ್ಲಿಂದ ಉತ್ತರಕ್ಕೆ ಸಾಗಿದರೆ 25 ಫರ್ಸಾಖ್ ದೂರದಲ್ಲಿ ನಿಮಗೆ ಕಾಶ್ಮೀರವು ಸಿಗುತ್ತದೆ.

**ಕನೌಜಿನಿಂದ ಘಜನಾ**

ಕನೌಜಿನಿಂದ ಪಶ್ಚಿಮದತ್ತ ಸಾಗಿದರೆ ಕನೌಜಿನಿಂದ 10 ಫರ್ಸಾಖ್ ದೂರದಲ್ಲಿರುವ ದಿಯಾಮೌ ನಗರಕ್ಕೆ ಬರುವಿರಿ; 10 ಫರ್ಸಾಖ್ ದೂರದಲ್ಲಿ ಕುತಿ; 10 ಫರ್ಸಾಖ್ ದೂರದಲ್ಲಿ ಅನಾರ್; 10 ಫರ್ಸಾಖ್ ದೂರದಲ್ಲಿ ಮೀರತ್; 10 ಫರ್ಸಾಖ್ ದೂರದಲ್ಲಿ ಪಾಣಿಪತ್ ಸಿಗುತ್ತದೆ. ಮೀರತ್ ಮತ್ತು ಪಾಣಿಪತ್ ನಡುವೆ ಜೌನ್ ನದಿ (ಯಮುನೆ) ಹರಿಯುತ್ತದೆ. ಅಲ್ಲಿಂದ 10 ಫರ್ಸಾಖ್ ದೂರದಲ್ಲಿ ಕೌವೀತಲ್ ಮತ್ತು ಅಲ್ಲಿಮದ 10 ಫರ್ಸಾಖ್ ದೂರದಲ್ಲಿ ಸುನ್ನಾಮ್ ಸಿಗುತ್ತದೆ.

ಅಲ್ಲಿಂದ ವಾಯುವ್ಯದತ್ತ ನಡೆಯುತ್ತ ಹೋದರೆ 9 ಫರ್ಸಾಖ್ ದೂರದಲ್ಲಿ ಆದಿತ್ತಹೌರ್ ಸಿಗುತ್ತದೆ; 6 ಫರ್ಸಾಖ್ ದೂರದಲ್ಲಿ ಜಜ್ಜನಿರ್ ಸಿಗುತ್ತದೆ; 8 ಫರ್ಸಾಖ್ ದೂರದಲ್ಲಿ ಇರಾವಾ ನದಿಯ ಪೂರ್ವಕ್ಕೆ ಲಾಹೋರ್‌ನ ರಾಜಧಾನಿಯಾದ ಮಂಡಾಹುಕುರ್ ನಿಗುತ್ತದೆ; 12 ಫರ್ಸಾಖ್ ದೂರದಲ್ಲಿ ಚಂದ್ರಾಹ ನದಿ ಇದೆ; 8 ಫರ್ಸಾಖ್ ದೂರದಲ್ಲಿ ಬಿಯಾತ್ತ ನದಿಯ ಪಶ್ಚಿಮಕ್ಕೆ ಝೇಲಂ ನದಿ ಇದೆ; ಕಾಂದಹಾರ್‌ನ ರಾಜಧಾನಿಯಾದ ವೈಹಿಂದ್, ಸಿಂಧ್ ನದಿಯ ಪಶ್ಚಿಮಕ್ಕೆ 20 ಫರ್ಸಾಖ್ ದೂರದಲ್ಲಿದೆ; 14 ಫರ್ಸಾಖ್ ದೂರದಲ್ಲಿ ಪುರುಶಾವರ್ ಇದೆ; 15 ಫರ್ಸಾಖ್ ದೂರದಲ್ಲಿ ದುನ್ಪುರ್ ಇದೆ; 12 ಫರ್ಸಾಖ್ ದೂರದಲ್ಲಿ ಕಾಬುಲ್ ಇದೆ; 17 ಫರ್ಸಾಖ್ ದೂರದಲ್ಲಿ ಘಜನಾ ಇದೆ.

**ಕಾಶ್ಮೀರವನ್ನು ಕುರಿತ ಟಿಪ್ಪಣಿಗಳು**

ಕಾಶ್ಮೀರವು ದುರ್ಲಭ ಪರ್ವತ ಕಣಿವೆಗಳಿಂದ ಸುತ್ತುವರೆಯಲ್ಪಟ್ಟ ಪ್ರಸ್ಥಭೂಮಿಯಲ್ಲಿದೆ. ಇದರ ದಕ್ಷಿಣ ಮತ್ತು ಪೂರ್ವದ ಭಾಗಗಳು ಹಿಂದುಗಳಿಗೆ ಸೇರಿದ್ದು. ಪಶ್ಚಿಮದ ಭಾಗವು ಬೋಲಾರ್ ಷಾಹ್, ಶುಗನನ್ ಷಾಹ್ ಎಂಬ ಬೇರೆ ಬೇರೆ ರಾಜರಿಗೆ ಸೇರಿದೆ. ಗಡಿಯವರೆಗಿನ ದೂರದ ಪ್ರದೇಶಗಳು ಬಾದಖಾಣ್‌ಗೆ ಮತ್ತು ವಖಾನ್ ಷಾಹ್‌ಗೆ ಸೇರಿವೆ. ಉತ್ತರದ ಮತ್ತು ಪೂರ್ವದ ಕೆಲ ಭಾಗಗಳು ಖೋತೇನ್ ತುರ್ಕರಿಗೆ ಮತ್ತು ಟಿಬೆಟ್‌ಗೆ ಸೇರಿವೆ. ಭೂತೇಶ್ವರದ ತುದಿಯಿಂದ ಟಿಬೆಟ್‌ನ ಮೂಲಕ ಕಾಶ್ಮೀರಕ್ಕೆ ಬರುವುದಾದರೆ ಆ ಅಂತರವು ಹೆಚ್ಚು ಕಡಿಮೆ 300 ಫರ್ಸಾಖ್ ಇದೆ.

ಕಾಶ್ಮೀರದ ವಾಸಿಗಳು ಕಾಲ್ನಡಿಗೆಯಲ್ಲಿಯೇ ಸಂಚರಿಸುತ್ತಾರೆ, ಅವರ ಬಳಿ ಪ್ರಯಾಣಕ್ಕೆಂದು ಪ್ರಾಣಿಗಳು ಇಲ್ಲ ಮತ್ತು ಆನೆಗಳೂ ಇಲ್ಲ. ಅವರಲ್ಲಿ ಕುಲೀನರು ಕತ್ ಎಂಬ ಪಲ್ಲಕ್ಕಿಗಳ ಒಳಗೆ ಕೂತು ಪಯಣಿಸುತ್ತಾರೆ. ಈ ಪಲ್ಲಕ್ಕಿಗಳನ್ನು ಜನ ಹೆಗಲ ಮೇಲೆ ಹೊತ್ತು ಸಾಗುತ್ತಾರೆ. ಇಲ್ಲಿಯ ಜನರಿಗೆ ತಮ್ಮ ದೇಶದ ಭೌಗೋಳಿಕ ಸಾಮರ್ಥ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಬಹಳ ಕಾಳಜಿ. ಆದ್ದರಿಂದ ಅವರ ಪ್ರವೇಶ ದ್ವಾರಗಳ ಬಳಿ ಮತ್ತು ಅವುಗಳನ್ನು ಸೇರುವ ಹಾದಿಗಳಲ್ಲಿ ಕಟ್ಟೆಚ್ಚರಿಕೆಯನ್ನು ವಹಿಸುತ್ತಾರೆ, ಮತ್ತು ಅಂತಹ ಆಯಕಟ್ಟಿನ ಜಾಗಗಳಲ್ಲಿ ಸದಾ ಪಹರೆ ಇರುತ್ತದೆ. ಅದರ ಪರಿಣಾಮವಾಗಿ ಅವರೊಂದಿಗೆ ವ್ಯಾಪಾರ ಅಥವಾ ವಾಣಿಜ್ಯ ವಹಿವಾಟುಗಳನ್ನು ನಡೆಸುವುದು ಕಷ್ಟ. ಮೊದಲಿನ ಸಂದರ್ಭವಾದರೆ ಅವರು  ಒಬ್ಬಿಬ್ಬರನ್ನಾದರೂ ವಿದೇಶಿ ಯಾತ್ರಿಕರನ್ನು, ಮುಖ್ಯವಾಗಿ ಯಹೂದಿಗಳನ್ನು ಒಳಬಿಟ್ಟುಕೊಳ್ಳುತ್ತಿದ್ದರು. ಆದರೆ ಈಗ ವೈಯಕ್ತಿಕ ಪರಿಚಯವಿಲ್ಲದಿದ್ದರೆ ಯಾವ ಹಿಂದುಗಳನ್ನೂ ಒಳಗೆ ಬಿಡುವುದಿಲ್ಲ, ಉಳಿದವರನ್ನಂತೂ ಬಹಳ ಕಡಿಮೆ.

ಕಾಶ್ಮೀರವನ್ನು ಪ್ರವೇಶಿಸುವುದಾದರೆ ಸಿಂಧ್ ಮತ್ತು ಝೇಲಂ ನದಿಗಳ ನಡುವೆ ಇರುವ ಬಬ್ರಹಾನ್ ನಗರವು ಸುಪ್ರಸಿದ್ಧವಾಗಿದೆ. ಈ ನಗರದ ಮೂಲಕ ಕಾಶ್ಮೀರವನ್ನು ಪ್ರವೇಶಿಸುವುದು ಉತ್ತಮ. ಅಲ್ಲಿಂದ ನದಿಯ  ಸೇತುವೆ ಸಿಗುತ್ತದೆ. ಇಲ್ಲಿ ಕುಶನಾರಿ ನದಿ ಮತ್ತು ಮಾಹ್ವಿ ನದಿ

ಕೂಡುತ್ತವೆ. ಇವೆರಡೂ ನದಿಗಳು ಶಮಿಲಾನ್ ಪರ್ವತದಿಂದ ಹರಿದು ಬರುತ್ತವೆ ಮತ್ತು ಝೇಲಂ ನದಿಗೆ ಧುಮುಕುತ್ತವೆ. ಇದು 8 ಫರ್ಸಾಖ್ ದೂರ.

ಅಲ್ಲಿಂದ ಐದು ದಿನ ಪಯಣಿಸಿದರೆ ಝೇಲಂ ನದಿ ಹರಿದು ಬರುವ ಕಮರಿಯು ಸಿಗುತ್ತದೆ. ಈ ಕಮರಿಯ ಮತ್ತೊಂದು ಕೊನೆಗೆ ಝೇಲಂ ನದಿಯ ಇಕ್ಕೆಲಗಳಲ್ಲಿಯೂ ದ್ವಾರ್ ಎಂಬ ಕಾವಲುಗೋಪುರವಿದೆ. ಈ ಕಮರಿಯನ್ನು ದಾಟಿ ನೀವು ಬಯಲು ಪ್ರದೇಶಕ್ಕೆ ಬರುವಿರಿ. ಹಾಗೆ ನಡೆಯುತ್ತ ಎರಡು ದಿನಗಳಲ್ಲಿ ಕಾಶ್ಮೀರದ ರಾಜಧಾನಿಯಾದ ಅಧಿಷ್ಠಾನಕ್ಕೆ ಬರುವಿರಿ. ಮಾರ್ಗಮಧ್ಯದಲ್ಲಿ ಕಣಿವೆಯ ಎರಡೂ ಬದಿಗೆ ಬಾರಾಮುಲ್ಲಾದಂತೆ ಹರಡಿಕೊಂಡಿರುವ ಉಷ್ಕಾರಾ ಗ್ರಾಮವು ಸಿಗುತ್ತದೆ.

ಕಾಶ್ಮೀರ ನಗರವು ನಾಲ್ಕು ಫರ್ಸಾಖ್ ನಷ್ಟು ಅಗಲವಾಗಿ ಹರಡಿಕೊಂಡಿದೆ. . ಇದು ಝೇಲಂ ನದಿಯ ಎರಡೂ ತಟಗಳಿಗೆ ಹೊಂದಿಕೊಂಡು ಬೆಳೆದ ನಗರವಾಗಿದೆ. ನದಿಯ ಎರಡೂ ತಟಗಳ ನಗರ ಭಾಗವನ್ನು ಸೇತುವೆಗಳು ಮತ್ತು ದೋಣಿಗಳ ಮೂಲಕ ತಲುಪಬಹುದು. ಝೇಲಂ ನದಿಯು ಹರಮಕೋಟ್ ಪರ್ವತಗಳಲ್ಲಿ, ಗಂಗಾ ನದಿ ಉಗಮಸ್ಥಾನದಲ್ಲೇ ಉಗಮವಾಗುತ್ತದೆ. ಅದು ಶೀತಮಯ ವಾತಾವರಣವನ್ನು ಹೊಂದಿದ ದುರ್ಗಮ ಪ್ರದೇಶವಾಗಿದೆ, ಅಲ್ಲಿ ಹಿಮವು ಕರಗುವುದೇ ಇಲ್ಲ. ಈ ಪರ್ವತ ಪ್ರದೇಶದ ಹಿಂದೆ ಮಹಾಚೀನ ಇದೆ. ಝೇಲಂ ನದಿಯು ಪರ್ವತಗಳಿಂದ ಆರಂಭಿಸಿ ಎರಡು ದಿನಗಳಲ್ಲಿ ಅಧಿಷ್ಠಾನವನ್ನು ದಾಟುತ್ತದೆ. ನಾಲ್ಕು ಫರ್ಸಾಖ್ ದಾಟಿದರೆ ಅದು ಒಂದು ಚದುರ ಫರ್ಸಾಖ್ ವಿಸ್ತೀರ್ಣದ ಜೌಗು ಪ್ರದೇಶವನ್ನು ಪ್ರವೇಶಿಸುತ್ತದೆ. ಈ ಜೌಗು ಪ್ರದೇಶದ ಆಸುಪಾಸಿನಲ್ಲಿ ಜನರು ತೋಟಗಳನ್ನು ಹೊಂದಿದ್ದಾರೆ. ಅಂತಹ ಪ್ರದೇಶಗಳ ಮೇಲೆ ಅವರು ತಮ್ಮ ಸ್ವಾಮ್ಯವನ್ನು ಸ್ಥಾಪಿಸಿಕೊಳ್ಳುತ್ತಾರೆ. ಈ ಜೌಗನ್ನು ದಾಟಿ ಝೇಲಂ ಉಷ್ಕಾರಾ ಗ್ರಾಮವನ್ನು ಪ್ರವೇಶಿಸುತ್ತದೆ ಆಮೇಲೆ ಮೇಲೆ ಉಲ್ಲೇಖಿಸಿದ ಕಮರಿಯನ್ನು ಪ್ರವೇಶಿಸುತ್ತದೆ.

**ಸಿಂಧ್ ನದಿಯ ಮೇಲ್-ಹರಿವು ಹಾಗು ಭಾರತದ ಉತ್ತರ ಮತ್ತು ವಾಯುವ್ಯದ ಗಡಿಗಳು**

ಸಿಂಧ್ ನದಿಯು ತುರ್ಕರ ಆಧಿಪತ್ಯದಲ್ಲಿರುವ ಉನಾಂಗ್ ಪರ್ವತಗಳಲ್ಲಿ ಹುಟ್ಟುತ್ತದೆ. ಅದನ್ನು ನೀವು ಈ ಮುಂದಿನ ಮಾರ್ಗದ ಮೂಲಕ ತಲುಪಬಹುದು: ನೀವು ಕಾಶ್ಮೀರವನ್ನು ಯಾವ ಕಮರಿಯ ಮೂಲಕ ಪ್ರವೇಶಿಸಿದಿರೋ ಅದನ್ನು ದಾಟಿ ಪ್ರಸ್ಥಭೂಮಿಯತ್ತ ನಡೆಯಬೇಕು. ಅಲ್ಲಿಂದ ಎರಡು ದಿನಗಳ ಪಯಣ-ಎಡ ಬದಿಗೆ ಬೊಲಾರ್ ಮತ್ತು ಶಾಮಿಲಾನ್ ಪರ್ವತಗಳು ಸಿಗುತ್ತವೆ- ಮಾಡಬೇಕು. . ಅಲ್ಲಿ ಭಟ್ಟವರ್ಯನ್ ಎಂದು ಕರೆಯಲಾಗುವ ತುರ್ಕರ ಬುಡಕಟ್ಟು ಸಮುದಾಯವಿದೆ. ಅವರ ರಾಜನಿಗೆ ಭಟ್ಟ-ಷಾಹ್ ಎಂಬ ನಾಮಾಂಕಿತವಿರುತ್ತದೆ. ಗಿಲ್‌ಗಿಟ್, ಅಶ್ವಿರಾ, ಶಿಲ್ತಾಸ್ ಎಂಬವು ಅವರ ನಗರಗಳು ಮತ್ತು ಟರ್ಕಿಷ್ ಅವರ ಭಾಷೆ. ಇವರ ಒಳಹಾದಿಗಳಿಂದಾಗಿ ಕಾಶ್ಮೀರವು ಬಹಳ ತೊಂದರೆಯನ್ನು ಅನುಭವಿಸುತ್ತದೆ. ನದಿಯ ಎಡಬದಿಯಲ್ಲಿ ನಡೆಯುತ್ತ ಹೋದರೆ ನೀವು

ಕೃಷಿಭೂಮಿಯನ್ನು ಕಾಣುವಿರಿ. ನಂತರ ರಾಜಧಾನಿ ಸಿಗುತ್ತದೆ. ನದಿಯ ಬಲಬದಿಗೆ ನಡೆಯುತ್ತ ಹೋದರೆ ರಾಜಧಾನಿಯ ದಕ್ಷಿಣಕ್ಕೆ ಬಹಳ ಹತ್ತಿರ ಹತ್ತಿರವಿರುವ ಅನೇಕ ಹಳ್ಳಿಗಳು ಸಿಗುತ್ತವೆ. ನಂತರ ಗುಮ್ಮಟದಂತಹ ಶಿಖರವನ್ನು ಹೊಂದಿದ ದನ್ಬಾವಾಂಡ್ ಪರ್ವತ ಹೋಲುವ ಕುಲಾರಜಕ್ ಪರ್ವತ ಸಿಗುತ್ತದೆ. ಅಲ್ಲಿ ಹಿಮ ಕರಗುವುದೇ ಇಲ್ಲ. ತಾಕೇಶ್ವರ್ ಮತ್ತು ಲೌಹಾವರ್ (ಲಾಹೋರ್) ನಿಂದ ಈ ಪರ್ವತವು ಸದಾ ಕಾಣಿಸುತ್ತದೆ. ಈ ಶಿಖರ ಮತ್ತು ಕಾಶ್ಮೀರದ ನಡುವಿನ ಅಂತರವು ಎರಡು ಫರ್ಸಾಖ್. ಇದರ ದಕ್ಷಿಣಕ್ಕೆ ರಾಜಗಿರಿ ಕೋಟೆ ಮತ್ತು ಪಶ್ಚಿಮಕ್ಕೆ ಲಾಹೋರ್ ಕೋಟೆ ಇದೆ. ಇವೆರಡೂ ನಾನು ನೋಡಿದ ಬಹಳ ಸುಭದ್ರ ಕೋಟೆಗಳು. ರಾಜಾವರಿ ನಗರವು ಈ ಶಿಖರದಿಂದ ಮೂರು ಫರ್ಸಾಖ್ ದೂರದಲ್ಲಿದೆ. ಇದು ನಮ್ಮ ವ್ಯಾಪಾರಿಗಳು ಹೋಗುವ ಕೊಟ್ಟ ಕೊನೆಯ ತಾಣವಾಗಿದೆ, ಇದನ್ನು ದಾಟಿ ಅವರು ಹೋಗುವುದಿಲ್ಲ. ಇದು ಭಾರತದ ಉತ್ತರದ ಗಡಿ.

ಭಾರತದ ಪಶ್ಚಿಮದ ಗಡಿಯ ಸಿಂಧ್ ಕಣಿವೆಯವರೆಗೂ ಹರಡಿಕೊಂಡಿರುವ ಪರ್ವತ ಪ್ರದೇಶದಲ್ಲಿ ವಿವಿಧ ಆಫ್ಘನ್ ಬುಡಕಟ್ಟು ಸಮುದಾಯಗಳು ವಾಸಿಸುತ್ತವೆ.

**ಭಾರತದ ಪಶ್ಚಿಮ ಮತ್ತು ದಕ್ಷಿಣದ ಎಲ್ಲೆಗಳು**

ಭಾರತದ ದಕ್ಷಿಣದ ಎಲ್ಲೆಯು ಮಹಾಸಾಗರವಾಗಿದೆ. ಭಾರತದ ಕಡಲ ತೀರವು ಮಕರಾನ್ ದೇಶದ ರಾಜಧಾನಿಯಾದ ತೀಜ್ ನಿಂದ ಆರಂಭಗೊಂಡು ಆಗ್ನೇಯ ದಿಕ್ಕಿನಲ್ಲಿ ಅಲ್-ದೈಬಾಲ್ ಪ್ರದೇಶದವರೆಗೂ ವ್ಯಾಪಿಸಿಕೊಂಡಿದೆ. ಈ ವ್ಯಾಪ್ತಿಯೂ ಒಟ್ಟೂ ಸುಮಾರು 40 ಫರ್ಸಾಖ್ ಇದೆ. ಇವೆರಡು ಜಾಗಗಳ ನಡುವೆ ತೂರಾನ್ ಕೊಲ್ಲಿ ಇದೆ. ಕೊಲ್ಲಿಯೆಂದರೆ ಭೂಪ್ರದೇಶದೊಳಗೆ ಸಮುದ್ರ ಅಥವಾ ನದಿ ಒಳಹೊಕ್ಕಿರುವುದು. ನೀರು ಭೂಖಂಡದೊಳಗೆ ನುಗ್ಗಿರುತ್ತದೆ. ಉಬ್ಬರವಿಳಿತ ಮತ್ತು ಪ್ರವಾಹಗಳ ಕಾರಣದಿಂದ ಇದು ನೌಕಾ ಪಯಣಕ್ಕೆ ಬಹಳ ಅಪಾಯಕಾರಿ. ಅಳಿವೆ ನದೀಮುಖವು ಕೊಲ್ಲಿಯ ರೀತಿಯೆ ಇರುತ್ತದೆ, ಆದರೆ ಅದು ಸಮುದ್ರವು ಭೂಖಂಡದೊಳಗೆ ನುಗ್ಗಿ ಆದದ್ದಲ್ಲ. ಬದಲಿಗೆ ಹರಿವ ನದಿಯೊಂದು ಮಹಾಸಾಗರವನ್ನು ಸೇರುವ ತಾಣವಾಗಿದೆ. ನದಿಯು ಸಾಗರವನ್ನು ಸೇರುವ ಜಾಗದಲ್ಲಿ ತನ್ನ ಹರಿವನ್ನು ನಿಲ್ಲಿಸಿ ಕೊಳದಂತೆ ಆಗಿರುತ್ತದೆ. ಈ ಅಳಿವೆಗಳೂ ನೌಕಾ ಪಯಣಕ್ಕೆ ಒಳ್ಳೆಯದಲ್ಲ, ಏಕೆಂದರೆ ಅದು ಸಿಹಿನೀರಾಗಿರುವುದರಿಂದ ಉಪ್ಪುನೀರಿನ ಕಡಲಿನ ಹಾಗೆ ನೌಕೆಯ ಭಾರವನ್ನು ಹೊರುವುದಿಲ್ಲ.

ಈ ಕೊಲ್ಲಿಯ ನಂತರ ಕಛ್ ಮತ್ತು ಸೋಮನಾಥದ ಸಣ್ಣ ಮುನ್ನಾ, ದೊಡ್ಡ ಮುನ್ನಾ, ಬವಾರಿಜ್ ಎಂಬ ಕಡಲುಗಳ್ಳರು ಸಿಗುತ್ತಾರೆ. ಅವರು ಬೀರಾ ಎಂಬ ನೌಕೆಯಲ್ಲಿ ಕಡಲ ಪ್ರಯಾಣಿಕರನ್ನು ದರೋಡೆ ಮಾಡುತ್ತಾರೆ. ಈ ತೀರದ ಮೇಲೆ ಸಿಗುವ ಜಾಗಗಳು ಹೀಗಿವೆ: ದೈಬಾಲ್‌ನಿಮದ 50 ಫರ್ಸಾಖ್ ದೂರದಲ್ಲಿ ತವಲ್ಲೇಶ್ವರ್ ಇದೆ; 12 ಫರ್ಸಾಖ್ ದೂರದಲ್ಲಿ ಲೋಹರಾನಿ ಇದೆ; ಬಾಗಾವು 12 ಫರ್ಸಾಖ್; 6 ಫರ್ಸಾಖ್ ದೂರದಲ್ಲಿ ಮುಕ್ಲ್ ಮರವು ಬೆಳೆಯುವ ಕಛ್ ಸಿಗುತ್ತದೆ, ಮತ್ತು ಬರೋಯ್

ಸಿಗುತ್ತದೆ; 14 ಫರ್ಸಾಖ್ ದೂರದಲ್ಲಿ ಸೋಮನಾಥವು ಸಿಗುತ್ತದೆ; 30 ಫರ್ಸಾಖ್ ದೂರದಲ್ಲಿ ಕಂಬಾಯತ್ ಸಿಗುತ್ತದೆ; 2 ದಿನಗಳಲ್ಲಿ ಅಸಾವಿಲ್ ಸಿಗುತ್ತದೆ; 30 ಫರ್ಸಾಖ್ ದೂರದಲ್ಲಿ ಬಿಹ್ರೊಜ್ ಸಿಗುತ್ತದೆ (?); 50 ಫರ್ಸಾಖ್ ದೂರದಲ್ಲಿ ಸಂದನ್ ಸಿಗುತ್ತದೆ; 6 ಫರ್ಸಾಖ್ ದೂರದಲ್ಲಿ ಸುಬಾರು ಸಿಗುತ್ತದೆ; ಅಲ್ಲಿಂದ ಮುಂದೆ 5 ಫರ್ಸಾಖ್ ದೂರದಲ್ಲಿ ಥಾನಾ ಸಿಗುತ್ತದೆ.

ನಂತರ ಕಡಲ ತೀರದ ಲಾರಾನ್ ದೇಶಕ್ಕೆ ಬರುವಿರಿ. ಅಲ್ಲಿ ಜಿಮೂರ್ ನಗರವಿದೆ. ಅಲ್ಲಿಂದ ಮುಂದೆ ವಲ್ಲಭ, ಕಾಂಜಿ, ಮತ್ತು ದರ್ವಡ ನಗರಗಳು ಸಿಗುತ್ತವೆ. ಅಲ್ಲಿಂದ ಮುಂದೆ ಸಾಗಿದರೆ ಸಿಂಗಳದೀಬ್ ಅಥವಾ ಸರಂದೀಪ್ (ಸಿಲೋನ್) ಎಂಬ ದ್ವೀಪದ ಕೊಲ್ಲಿ ಸಿಗುತ್ತದೆ. ಈ ಕೊಲ್ಲಿಯ ಸುತ್ತ ಪಂಜಯಾವರ್ ನಗರವಿದೆ. ಈ ನಗರವು ಪಾಳು ಬಿದ್ದ ಮೇಲೆ ಜಾವುರ್ ರಾಜನು ಪಶ್ಚಿಮದ ಕಡಲ ತೀರದ ಮೇಲೆ ಪಡ್ನಾರ್ ಎಂಬ ಹೊಸ ನಗರವನ್ನು ಕಟ್ಟಿದ.

ಕಡಲ ತೀರದಲ್ಲಿ ಮುಂದೆ ಸಾಗಿದರೆ ಉಮ್ಮಲ್ನಾರಾ ಮತ್ತು ರಾಮ್‌ಶೆರ್ (ರಾಮೇಶ್ವರ) ಸಿಗುತ್ತದೆ. ರಾಮ್‌ಶೆರ್ ಸಂರಂದೀಪ್ ನ ವಿರುದ್ಧ ದಿಕ್ಕಿಗೆ ಇದೆ. ಈ ಎರಡು ಜಾಗಗಳ ನಡುವಿನ ಅಂತರವು 12 ಫರ್ಸಾಖ್. ಪಂಜಯಾವರ್‌ನಿಂದ ರಾಮ್‌ಶೆರ್ ಗೆ 40 ಫರ್ಸಾಖ್ ದೂರ, ರಾಮ್‌ಶೆರ್‌ನಿಂದ ಸೇತುಬಂಧವು 2 ಫರ್ಸಾಖ್ ದೂರ. ಸೇತುಬಂಧವೆಂದರೆ ಮಹಾಸಾಗರದ ಸೇತುವೆ. ದಶರಥನ ಮಗ ರಾಮನು ಇಲ್ಲಿಯ ಭೂಖಂಡದಿಂದ ಲಂಕೆಯ ಕೋಟೆಯನ್ನು ತಲುಪಲು ಸಮುದ್ರದಲ್ಲಿ ಕಟ್ಟಿದ ಕಲ್ಲಿನ ಗೋಡೆ. ಈಗ ಆ ಜಾಗದಲ್ಲಿ ಅಲ್ಲಲ್ಲಿ ಪರ್ವತಗಳಿವೆ ಮತ್ತು ಅವುಗಳ ನಡುವೆ ಮಹಾಸಾಗರ ಹರಿಯುತ್ತದೆ. ಸೇತುಬಂಧದಿಂದ 16 ಫರ್ಸಾಖ್ ದೂರದ ಪೂರ್ವ ದಿಕ್ಕಿನಲ್ಲಿ ಕಿಹ್ಕಿಂಧ್ (ಕಿಷ್ಕಿಂಧೆ), ಮಂಗಗಳ ಪರ್ವತವಿದೆ, ಇಲ್ಲಿ ಪ್ರತಿನಿತ್ಯವೂ ದಟ್ಟ ಮರಗಳ ಹೊದರುಗಳಿಂದ ಮಂಗಗಳ ರಾಜನು ತನ್ನ ಹಿಂಡಿನೊಂದಿಗೆ ಬರುತ್ತಾನೆ ಮತ್ತು ಈ ಮಂಗಗಳು ನಿತ್ಯವೂ ತಮಗೆಂದೇ ಮೀಸಲಾದ ನಿರ್ದಿಷ್ಟ ಜಾಗಗಳಲ್ಲಿ ಕೂತುಕೊಳ್ಳುತ್ತವೆ. ಈ ಜಾಗದಲ್ಲಿ ವಾಸವಾಗಿರುವ ಜನರು ಎಲೆಗಳಲ್ಲಿ ಅನ್ನವನ್ನು ತಂದು ಮಂಗಗಳಿಗೆ ಇಡುತ್ತಾರೆ. ಅದನ್ನು ತಿಂದ ನಂತರ ಮಂಗಗಳು ತಮ್ಮ ತಾವಿನತ್ತ ಮರಳಿ ಹೋಗುತ್ತವೆ. ಎಲ್ಲಾದರೂ ಮಂಗಗಳನ್ನು ನಿರ್ಲಕ್ಷಿಸಿದರೆ ಆ ಜಾಗಕ್ಕೆ ಒಳಿತಾಗುವುದಿಲ್ಲ, ಏಕೆಂದರೆ ಮಂಗಗಳು ಬಹುಸಂಖ್ಯೆಯಲ್ಲಿರುತ್ತವೆ ಮತ್ತು ಅವು ಕಾಡು ಮಂಗಗಳಷ್ಟೇ ಅಲ್ಲ ಆಕ್ರಮಣಕಾರಿ ಸ್ವಭಾವದವು ಕೂಡ. ಜನರ ನಂಬಿಕೆಯ ಪ್ರಕಾರ ಈ ಮಂಗಗಳು ಮೊದಲು ಮನುಷ್ಯರಾಗಿದ್ದವರು. ರಾಮ ರಾಕ್ಷಸರ ವಿರುದ್ಧ ಸಮರ ಸಾರಿದಾಗ ಈ ವಾನರ ಮನುಷ್ಯರು ಅವನಿಗೆ ಸಹಾಯ ಮಾಡಿದ್ದರಿಂದ ರಾಮನು ಈ ಪ್ರದೇಶವನ್ನು ಅವರಿಗೆಂದು ಉಂಬಳಿ ಕೊಟ್ಟಿದ್ದ. ಅಲ್ಲಿಂದಾಚೆಗೆ ಈ ಜಾಗವು ಅವರ ಪರಂಪರಾಗತ ಕ್ಷೇತ್ರವಾಯಿತು. ಯಾರಾದರೂ ಮನುಷ್ಯನು ಅವರೊಂದಿಗೆ ಪ್ರೀತಿಯಿಂದ ವರ್ತಿಸಿ ರಾಮ ಕಾವ್ಯವನ್ನು (ರಾಮಾಯಣ) ಅವರೆದುರು ಹೇಳಿದರೆ ಅಥವಾ ರಾಮ ಮಂತ್ರವನ್ನು ಜಪಿಸಿದರೆ ಅವು ಸುಮ್ಮನೆ ಕುಳಿತು ಕೇಳುತ್ತವೆಯಂತೆ. ಅಷ್ಟೇ ಅಲ್ಲ ಹಾದಿ ತಪ್ಪಿದವರಿಗೆ ಸರಿಯಾದ ಮಾರ್ಗವವನ್ನು ಸೂಚಿಸಿ ಅವರಿಗೆ ಮಾಂಸ ಮತ್ತು ಕುಡಿಯಲು

ಕೊಡುತ್ತವೆಯಂತೆ. ಇವೆಲ್ಲವೂ ಜನರ ನಂಬಿಕೆಗಳಾಗಿವೆ. ಇದರಲ್ಲಿ ಏನಾದರೂ ಸತ್ಯವಿದ್ದರೆ, ಅದರ ಪರಿಣಾಮವು ಹೊರಡಿಸುವ ಮಾಧುರ್ಯವು ಹಿಂದೆ ಹರಿಣಗಳ ಬೇಟೆಗೆ ಸಂಬಂಧಿಸಿ ನಾವು ಪ್ರಸ್ತಾಪಿಸಿದಂತಿದೆ.

**ಭಾರತ ಮತ್ತು ಚೀನಾದ ಸಮುದ್ರಗಳಲ್ಲಿ ಇರುವ ದ್ವೀಪಗಳು**

ಈ ಮಹಾಸಾಗರದಲ್ಲಿ ಪೂರ್ವಕ್ಕೆ ಇರುವ ದ್ವೀಪಗಳು ಭಾರತಕ್ಕಿಂತ ಚೀನಾಕ್ಕೆ ಹೆಚ್ಚು ಹತ್ತಿರದಲ್ಲಿವೆ. ಇವು ಝಬಾಜ್ ದ್ವೀಪಗಳು. ಇವುಗಳನ್ನು ಹಿಂದುಗಳು ಸುವರ್ಣ ದ್ವೀಪ ಎಂದು ಕರೆಯುತ್ತಾರೆ. ಅಂದರೆ ಬಂಗಾರ ದ್ವೀಪಗಳು. ಈ ಮಹಾಸಾಗರದಲ್ಲಿ ಪಶ್ಚಿಮಕ್ಕೆ ಇರುವ ದ್ವೀಪಗಳು ನಿಗ್ರೊಗಳ (ಜಾಂಜ್ ಗಳ) ದ್ವೀಪಗಳು, ಮಧ್ಯದಲ್ಲಿರುವ ದ್ವೀಪಗಳು ರಾಮ್ ಮತ್ತು ದೀವ ದ್ವೀಪಗಳು (ಮಾಲೆದಿವ ಮತ್ತು ಲಕ್ಕದಿವ). ಖುಮೈರ್ ದ್ವೀಪಗಳೂ ಇದೇ ಸಮುಚ್ಚಯಕ್ಕೆ ಸೇರಿವೆ. ನಿಧಾನವಾಗಿ ಮೇಲೇಳುವುದು ದೀವ ದ್ವೀಪಗಳ ವಿಶೇಷ ಸ್ವರೂಪವಾಗಿದೆ. ಮೊದಲು ಮಹಾಸಾಗರದೊಳಗೆ ಮರಳಿನ ನೆಲ ಏಳುತ್ತದೆ, ನಂತರ ಅದು ಇನ್ನೂ ಮೇಲೇಳುತ್ತ ಎಲ್ಲ ದಿಕ್ಕುಗಳಲ್ಲಿಯೂ ಹರಡಿಕೊಂಡು ಗಟ್ಟಿ ನೆಲ ಕಾಣಿಸುತ್ತದೆ, ಅದೇ ಹೊತ್ತಿಗೆ ಅದೇ ಸಮುಚ್ಚಯದ ಇನ್ನೊಂದು ದ್ವೀಪವು ನಿಧಾನವಾಗಿ ಮಹಾಸಾಗರದೊಳಗೆ ಮುಳುಗುತ್ತದೆ. ಹೀಗೆ ತಾವಿರುವ ದ್ವೀಪ ಮುಳುಗುತ್ತದೆ ಎಂದು ಗೊತ್ತಾದ ತಕ್ಷಣ ಅಲ್ಲಿಯ ನಿವಾಸಿಗಳು ಬೇರೊಂದು ದ್ವೀಪಕ್ಕೆ ಹೊರಡುತ್ತಾರೆ. ಅಲ್ಲಿಗೆ ತಮ್ಮ ತೆಂಗಿನ ಮರಗಳು, ಖರ್ಜೂರದ ಮರಗಳು, ಬೇಳೆಕಾಳುಗಳು ಮತ್ತು ಮನೆ ಬಳಕೆಯ ಸಾಮಾನುಗಳನ್ನು ಹೊತ್ತು ಹೊಸ ದ್ವೀಪಗಳೀಗೆ ವಲಸೆ ಹೋಗುತ್ತಾರೆ. ಈ ದ್ವೀಪಗಳನ್ನು, ಅಲ್ಲಿ ಉತ್ಪಾದಿಸಲಾಗುವ ವಸ್ತುಗಳಿಗೆ ಅನುಗುಣವಾಗಿ ಎರಡು ವರ್ಗಗಳಲ್ಲಿ ವಿಂಗಡಿಸಲಾಗುತ್ತದೆ. ಹೀಗೆ ಅಲ್ಲಿ ದಿವ-ಕೂಧ ಅಥವಾ ಕವಡೆ ಚಿಪ್ಪುಗಳ ದ್ವೀಪ ಮತ್ತು ದಿವ-ಕನ್‌ಬಾರ್ ಅಥವಾ ಹಗ್ಗಗಳ ದ್ವೀಪ ಎಂಬ ಎರಡು ವರ್ಗದ ದ್ವೀಪಗಳಿವೆ. ದಿವ-ಕೂಧ ದ್ವೀಪಗಳಲ್ಲಿ ಕವಡೆ ಚಿಪ್ಪುಗಳನ್ನು ತೀರದಲ್ಲಿ ನೆಟ್ಟ ತೆಂಗಿನ ಗರಿಗಳಿಂದ ಬಾಚಿ ಸಂಗ್ರಹಿಸಲಾಗುತ್ತದೆ; ಮತ್ತು ದಿವ-ಕನ್‌ಬಾರ್ ದ್ವೀಪಗಳಲ್ಲಿ ತೆಂಗಿನ ನಾರುಗಳನ್ನು ಹೊಸೆದು ಹಡಗುಗಳ ಹಲಗೆಗಳಿಗೆ ಕಟ್ಟುವ ಹಗ್ಗ ಮಾಡಲಾಗುತ್ತದೆ.

ಅಲ್-ವಕವಕ ದ್ವೀಪವು ಖುಮೈರ್ ದ್ವೀಪ ಸಮುಚ್ಚಯಕ್ಕೆ ಸೇರಿದೆ. ಖುಮೈರ್ ಎನ್ನುವುದು ಸಾಮಾನ್ಯ ಜನ ಅಂದುಕೊಳ್ಳುವ ಹಾಗೆ ಹಣ್ಣುಗಳ ಬದಲಿಗೆ ಕಿರಿಚುವ ಮನುಷ್ಯರ ತಲೆಗಳನ್ನು ಉತ್ಪಾದಿಸುವ ಮರದ ಹೆಸರಲ್ಲ. ಅದು ಅಲ್ಲಿರುವ ಬಿಳಿ ಬಣ್ಣದ ಜನರ ಹೆಸರು. ಈ ಜನ ಕುಳ್ಳಗೆ ತುರ್ಕರ ಮೈಕಟ್ಟನ್ನು ಹೊಂದಿದವರಾಗಿರುತ್ತಾರೆ. ಇವರು ಹಿಂದುಗಳ ಧರ್ಮವನ್ನೆ ಪಾಲಿಸುತ್ತಾರೆ ಮತ್ತು ಅವರಲ್ಲಿ ಕಿವಿ ಚುಚ್ಚುವ ಪದ್ದತಿ ಇದೆ. ವಕವಕ ದ್ವೀಪದ ಕೆಲವರು ಕಪ್ಪು ವರ್ಣದವರೂ ಇದ್ದಾರೆ. ನಮ್ಮ ದೇಶಗಳಲ್ಲಿ ಗುಲಾಮರಾಗಿ ಇವರಿಗೆ ತುಂಬಾ ಬೇಡಿಕೆಯಿದೆ. ಜನರು ಅವರಿಂದ ಕಪ್ಪು ಎಬೊನಿ ಮರದ ದಿಮ್ಮಿಗಳನ್ನು (ಮರದ ನಾಟಾವನ್ನು) ತರಿಸುತ್ತಾರೆ. ಈ ಮರದ ತಿರುಳು

ಉಪಯೋಗಕ್ಕೆ ಬರುವಂಥದ್ದು, ಉಳಿದ ಭಾಗಗಳನ್ನು ಎಸೆಯಲಾಗುತ್ತದೆ. ಜಾಂಝ್ ದ್ವೀಪದಿಂದ ಮುಲಮ್ಮಾ, ಶೌಹತ್ ಮತ್ತು ಹಳದಿ ಗಂಧಧ ಮರದ ಭಾಗಗಳನ್ನು ತರಿಸಲಾಗುತ್ತದೆ.

ಹಿಂದಿನ ಕಾಲದಲ್ಲಿ ಸರಂದೀಪ್ ನ (ಸಿಲೋನ್/ಶ್ರೀಲಂಕಾ) ಕೊಲ್ಲಿಯಲ್ಲಿ ಮುತ್ತಿನ ತೀರಗಳಿದ್ದವು ಈಗ ಅವುಗಳನ್ನು ನಿರ್ಲಕ್ಷಿಸಲಾಗಿದೆ. ಈಗ ಸರಂದೀಪ್‌ನಲ್ಲಿ ಮುತ್ತುಗಳು ಸಿಗುವುದಿಲ್ಲವಾದ್ದರಿಂದ ಜಾಂಝ್ ದೇಶದ ಸುಫಲಾದಿಂದ ತರಿಸಲಾಗುತ್ತದೆ. ಅದಕ್ಕೆ ಸರಂದೀಪದ ಮುತ್ತುಗಳು ಈಗ ಸುಫಾಲಾಕ್ಕೆ ವಲಸೆ ಹೋಗಿವೆ ಎಂದು ಜನರು ಮಾತನಾಡಿಕೊಳ್ಳುತ್ತಾರೆ.

**ಭಾರತದ ಮಳೆ**

ಭಾರತದಲ್ಲಿ [ಹಿಂದ್‌ನಲ್ಲಿ] ಬೇಸಿಗೆಯಲ್ಲಾಗುವ ಉಷ್ಣವಲಯದ ಮಳೆಯ ಅವಧಿಯನ್ನು ವರ್ಷಕಾಲ ಎಂದು ಕರೆಯಲಾಗುತ್ತದೆ. ಈ ಮಳೆಯು ಧಂಡಿಯಾಗಿ ಸುರಿಯುತ್ತದೆ ಮತ್ತು ಬಹಳ ದಿನಗಳವರೆಗೆ ಬರುತ್ತದೆ.  ಪರ್ವತಗಳಿಂದ ತಡೆಯಲ್ಪಡದ ಉತ್ತರದ ಪ್ರಾಂತ್ಯಗಳಲ್ಲಿ ಹೆಚ್ಚು ಸುರಿಯುತ್ತದೆ. ತಮಗೆ ವರ್ಷಕಾಲವಿಲ್ಲ, ಆದರೆ ಪರ್ವತಗಳ ಸಮೀಪದ ಉತ್ತರದ ಪ್ರಾಂತ್ಯಗಳಲ್ಲಿ ಹೆಚ್ಚು ಮಳೆ ಎಂದು ಮುಲ್ತಾನಿನ ಜನ ನನಗೆ ಹೇಳುತ್ತಿದ್ದರು. ಭಾತಲ್ ಮತ್ತು ಇಂದ್ರವೇಧಿ ನಗರಗಳಲ್ಲಿ ಈ ಮಳೆಯು ಆಶಾಢದಲ್ಲಿ ಆರಂಭವಾಗಿ ಮುಂದೆ ನಾಲ್ಕು ತಿಂಗಳವರೆಗೆ ನೀರಿನ ಕೊಡಗಳೇ ಬೋರಲಾದಂತೆ ಸುರಿಯುತ್ತದೆ.ಇನ್ನೂ ಉತ್ತರದ ಪ್ರಾಂತ್ಯಗಳಲ್ಲಿ ಕಾಶ್ಮೀರದ ಪರ್ವತಗಳಿಂದ ಹಿಡಿದು ಜೂದಾರಿ ಶಿಖರದವರೆಗೆ, ದುನ್ಪೂರ್ ಮತ್ತು ಬರ್ಶಾವರ್ ನಡುವೆ, ಎರಡೂವರೆ ತಿಂಗಳವರೆಗೆ ಭಾರಿ ಮಳೆ ಸುರಿಯುತ್ತದೆ. ಈ ಮಳೆ ಶ್ರಾವಣದಲ್ಲಿ ಆರಂಭವಾಗುತ್ತದೆ. ಆದರೆ ಈ ಶಿಖರದ ಮತ್ತೊಂದು ಬದಿಗೆ ಮಳೆ ಇರುವುದಿಲ್ಲ ; ಉತ್ತರದಲ್ಲಿ ಭಾರೀ ತೂಕದ ಮೋಡಗಳುಗಳಿರುತ್ತವೆ, ಇವು ಅಲ್ಲಿಯೇ ಸುರಿಯುತ್ತವೆ, ಮೇಲೇರುವುದಿಲ್ಲ. ಮೋಡಗಳು ಪರ್ವತಗಳನ್ನು ತಲುಪಿದಾಗ ಅವು ಆಲಿವ್ ಅಥವಾ ದ್ರಾಕ್ಷಿಗಳ ಹಾಗೆ ಪರ್ವತದ ತುದಿಗಳಿಂದ ಒತ್ತಲ್ಪಟ್ಟು ಅಲ್ಲಿಯೆ ಸುರಿಯುತ್ತವೆ ಮತ್ತು ಪರ್ವತದಿಂದ ಆಚೆ ಸಾಗುವುದಿಲ್ಲ. ಆದ್ದರಿಂದ ಕಾಶ್ಮೀರದಲ್ಲಿ ವರ್ಷಕಾಲವಿಲ್ಲ, ಆದರೆ ಮಾಘ ಮಾಸದೊಂದಿಗೆ ಆರಂಭವಾಗುವ ಮಳೆಯು ನಿರಂತರವಾಗಿ ಎರಡುವರೆ ತಿಂಗಳು ಸುರಿಯುತ್ತದೆ. ಮತ್ತೆ ಚೈತ್ರ ಮಾಸದ ಮಧ್ಯದಲ್ಲಿ ಕೆಲವು ದಿನಗಳ ಮಳೆ ಇರುತ್ತದೆ. ಆಗ ಹಿಮ ಕರಗಿ ಭೂಮಿ ಸ್ವಚ್ಛವಾಗುತ್ತದೆ. ಈ ನಿಯಮಕ್ಕೆ ಅಪವಾದವಿರುವುದು ಕಂಡು ಬಂದಿಲ್ಲ; ಆದರೂ ಭಾರತದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಸ್ವಲ್ಪ ಮಟ್ಟಿನ ಹವಾಮಾನ ವೈಪರೀತ್ಯವು ಸಾಮಾನ್ಯವಾಗಿರುತ್ತದೆ.

## ಅಧ್ಯಾಯ 68

**ಆಹಾರ ಮತ್ತು ಪಾನೀಯ: ಕಟ್ಟುಪಾಡುಗಳು**

ಕ್ರಿಶ್ಚಿಯನ್ನರು ಮತ್ತು ಮ್ಯಾನಿಶಿಯನ್ಸ್‌ರಲ್ಲಿ ಇರುವಂತೆ ಇವರಲ್ಲಿಯೂ ಮೂಲತಃ ಕೊಲ್ಲುವುದು ನಿಷಿದ್ಧ. ಆದರೆ ಜನರಿಗೆ ಮಾಂಸವನ್ನು ತಿನ್ನುವ ಆಸೆ ಇರುತ್ತದೆ ಮತ್ತು ಅದಕ್ಕಾಗಿ ಅವರು ಎಲ್ಲ ನಿಯಮಗಳನ್ನೂ ಗಾಳಿಗೆ ತೂರುತ್ತಾರೆ. ಆದ್ದರಿಂದ ಇಲ್ಲಿ ಉಲ್ಲೇಖಿಸಲಾಗುವ ಕಟ್ಟಲೆಗಳು ಕೇವಲ ಬ್ರಾಹ್ಮಣರಿಗೆ ಮಾತ್ರ ಅನ್ವಯವಾಗುತ್ತದೆ, ಏಕೆಂದರೆ ಅವರು ಧರ್ಮದ [ರಿಲಿಜನ್ನಿನ] ರಕ್ಷಕರು ಮತ್ತು ತಮ್ಮ ವಾಂಛೆಗಳಿಗೆ ಶರಣಾಗುವುದು ಅವರಿಗೆ ನಿಷಿದ್ಧ. ಇದೇ ನಿಯಮವು ಬಿಶಪ್‌ಗಳ ದರ್ಜೆಗಿಂತ ಮೇಲಿನ ಸ್ಥಾನದಲ್ಲಿರುವ ಕ್ರಿಶ್ಚಿಯನ್ ಕ್ಲರ್ಜಿಗಳಿಗೂ ಅನ್ವಯವಾಗುತ್ತದೆ. ಅಂದರೆ ಚರ್ಚಿನ ಅಧಿಕಾರಿಗಳ ಶ್ರೇಣಿಯಲ್ಲಿ ಎಲ್ಲರಿಗಿಂತ ಮೇಲಿನ ಸ್ಥಾನದಲ್ಲಿರುವ ಅಧಿಕಾರಿಗಳಿಗೆ (ಮೆಟ್ರೊಪಾಲಿಟನ್ಸ್, ಕ್ಯಾಥೊಲಿಸಿ ಮತ್ತು ಪೇಟ್ರಿಯಾರ್ಕ್‌ಗಳು) ಮಾತ್ರ ಅನ್ವಯವಾಗುತ್ತದೆ. ಕೆಳಗಿನ ದರ್ಜೆಯ ಪ್ರೆಸ್ಬೈಟರ್ ಮತ್ತು ಡೀಕನ್‌ಗಳಿಗೆ ಅಲ್ಲ. ಆದರೆ ಈ ಸ್ಥಾನಗಳಲ್ಲಿರುವವನು ಅದೇ ಸಮಯಕ್ಕೆ ಒಬ್ಬ ಮಾಂಕ್ (ಸನ್ಯಾಸಿ) ಕೂಡ ಆಗಿದ್ದರೆ ಅವನಿಗೂ ನಿಯಮಗಳು ಅನ್ವಯವಾಗುತ್ತವೆ.

**ನಿಯಮ ಬದ್ಧವಾದ ಮತ್ತು ನಿಯಮ ಬಾಹಿರವಾದ ಪ್ರಾಣಿಗಳು**

ಪ್ರಾಣಿಗಳನ್ನು ಕತ್ತು ಹಿಸುಕಿ ಕೊಲ್ಲುವುದು ನಿಯಮ ಬದ್ಧವಾಗಿದೆ, ಆದರೆ ಅದು ಕೆಲವೇ ಕೆಲವು ಪ್ರಾಣಿಗಳನ್ನು ಮಾತ್ರ. ಈ ಕೆಲವು ಪ್ರಾಣಿಗಳನ್ನು ಕೊಲ್ಲುವುದಕ್ಕೆ ಅನುಮತಿ ಇದೆ ಮತ್ತು ಅವುಗಳ ಮಾಂಸವನ್ನು ಅವರು ತಿನ್ನಬಹುದು, ಆದರೆ ಆ ಪ್ರಾಣಿಯು ಆಕಸ್ಮಿಕವಾಗಿ ಸತ್ತರೆ ಅದರ ಮಾಂಸವನ್ನು ತಿನ್ನುವಂತಿಲ್ಲ. ಕೊಲ್ಲಲು ಅನುಮತಿ ಇರುವ ಪ್ರಾಣಿಗಳು: ಆಡು, ಕುರಿ, ಹರಿಣಗಳು, ಮೊಲಗಳು ಮತ್ತು ಗಂಡಾಮೃಗಗಳು, ಎಮ್ಮೆಗಳು, ಮೀನು, ನೀರಿನಲ್ಲಿರುವ ಮತ್ತು ಭೂಮಿಯ ಮೇಲೆ ಓಡಾಡುವ (ಗುಬ್ಬಿಯಂತಹ) ಹಕ್ಕಿಗಳು, ಉಂಗುರ ಪಾರಿವಾಳ, ಕೌಜುಗ ಹಕ್ಕಿಯನ್ನು ಹೋಲುವ ಹಕ್ಕಿಗಳು, ಪಾರಿವಾಳಗಳು, ನವಿಲುಗಳು, ಮಾನವರಿಗೆ ಅಸಹ್ಯ ಎನಿಸದ ಮತ್ತು ಅನಿಷ್ಟವನ್ನು ತಂದೊಡ್ಡದ ಪ್ರಾಣಿಗಳು.

ಆದರೆ ದನಗಳು, ಕುದುರೆಗಳು, ಹೇಸರುಗತ್ತೆಗಳು, ಕತ್ತೆಗಳು, ಒಂಟೆಗಳು, ಆನೆಗಳು, ಸಾಕಿದ ಕೋಳಿಗಳು, ಕಾಗೆಗಳು, ಗಿಳಿಗಳು, ಕೋಗಿಲೆಗಳು ಮತ್ತು ಎಲ್ಲ ರೀತಿಯ ಮೊಟ್ಟೆಗಳು ಮತ್ತು ಹೆಂಡ ನಿಷಿದ್ಧವಾಗಿದೆ. ಕೊನೆಯದನ್ನು ಸೇವಿಸಲು ಶೂದ್ರರಿಗೆ ಅನುಮತಿ ಇದೆ. ಶೂದ್ರನು ಅದನ್ನು ಕುಡಿಯಬಹುದು, ಆದರೆ ಮಾರುವಂತಿಲ್ಲ, ಮತ್ತು ಅವನು ಮಾಂಸವನ್ನೂ ಮಾರುವಂತಿಲ್ಲ.

**ದನದ ಮಾಂಸವು ಏಕೆ ನಿಷಿದ್ಧವಾಯಿತು?**

ಭರತನ ಸಮಯಕ್ಕಿಂತಲೂ ಹಿಂದೆ ದನಗಳನ್ನು ತಿನ್ನುವುದು ನಿಷಿದ್ಧವಾಗಿರಲಿಲ್ಲ ಎಂದು ಕೆಲವು ಹಿಂದುಗಳು ಹೇಳುತ್ತಾರೆ. ಆಗ ಯಜ್ಞಗಳಲ್ಲಿ ದನಗಳನ್ನು ಕೊಲ್ಲುವ ಪದ್ಧತಿ ಅಸ್ತಿತ್ವದಲ್ಲಿತ್ತು ಎಂದು ಹೇಳುತ್ತಾರೆ. ಭರತನ ನಂತರ ಮನುಷ್ಯರು ತಮ್ಮ ಕರ್ತವ್ಯಗಳನ್ನು ಪೂರೈಸುವ ಶಕ್ತಿಯನ್ನು ಕಳೆದುಕೊಂಡರು, ದುರ್ಬಲರಾದರು ಎನ್ನುವ ಕಾರಣಕ್ಕೆ ದನಗಳನ್ನು ಕೊಲ್ಲುವುದು ನಿಷಿದ್ಧವಾಯಿತು.

ಜೊತೆಗೆ ವೇದವೂ ಸಹ, ಇದು ಮೊದಲು ಒಂದೇ ಇತ್ತು, ಕಾಲಕ್ರಮೇಣ ಮಾನವರಿಗೆ ಅಧ್ಯಯನ ಮಾಡಲು ಅನುಕೂಲವಾಗಲಿ ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿತು. ಆದರೆ ಈ ಪ್ರತಿಪಾದನೆಯು ದುರ್ಬಲ ಪುರಾವೆಗಳನ್ನು ಹೊಂದಿದೆ. ಏಕೆಂದರೆ ದನಗಳ ಮಾಂಸವನ್ನು ನಿಷೇಧಿಸುವಂತಹ ಕಟ್ಟಳೆಯು ಮೇಲೆ ಉಲ್ಲೇಖಿಸಿದ ಕಟ್ಟಳೆಗಿಂತ ಲಘುವಾದ ಮತ್ತು ಕಡಿಮೆ ಕಟ್ಟುನಿಟ್ಟಿನ ಕಟ್ಟಳೆಯೇನೂ ಅಲ್ಲ. ಬದಲಿಗೆ ಅದಕ್ಕಿಂತ ಹೆಚ್ಚು ಕಟ್ಟುನಿಟ್ಟಾದ ಮತ್ತು ಗುರುತರವಾದ ಕಟ್ಟಳೆಯಾಗಿದೆ.

ಇನ್ನು ಕೆಲವು ಹಿಂದುಗಳು ಹೇಳಿದ ಪ್ರಕಾರ ಬ್ರಾಹ್ಮಣರಿಗೆ ದನದ ಮಾಂಸ ತಿನ್ನುವುದರಿಂದ ದೈಹಿಕವಾಗಿ ಬಾಧೆಯಾಗತೊಡಗಿತು. ಅವರ ದೇಶವು ಮೊದಲೇ ಉಷ್ಣ ಪ್ರದೇಶವಾಗಿದೆ. ದೇಹದ ಒಳಗಿನ ಭಾಗಗಳು ತಂಪಾಗಿರುತ್ತವೆ, ನೈಸರ್ಗಿಕ ಉಷ್ಣತೆಯು ಕ್ಷೀಣಗೊಂಡಿರುತ್ತದೆ. ಜೀರ್ಣಶಕ್ತಿಯೂ ಕ್ಷೀಣವಾಗಿರುವುದರಿಂದ ಅವರು ತಮ್ಮ ಜೀರ್ಣಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಊಟದ ನಂತರ ಎಲೆ ಅಡಿಕೆಯನ್ನು ತಿನ್ನುತ್ತಾರೆ. ಎಲೆಯಡಿಕೆಯು ದೇಹದ ಉಷ್ಣತೆಯನ್ನು ಹೆಚ್ಚಿಸುತ್ತದೆ. ಎಲೆಗೆ ಸವರುವ ಸುಣ್ಣವು ದೇಹದೊಳಗಿನ ತೇವಾಂಶವನ್ನು ಒಣಗಿಸುತ್ತದೆ ಮತ್ತು ಹಲ್ಲುಗಳಿಗೆ, ವಸಡುಗಳಿಗೆ ಹಾಗೂ ಹೊಟ್ಟೆಗೆ ಅದು ಸ್ರಾವರೋಧಕದಂತೆ (astringent) ಕೆಲಸ ಮಾಡುತ್ತದೆ. ಹೀಗಾಗಿಯೇ ಅವರು ದನದ ಮಾಂಸವನ್ನು ನಿಷೇಧಿಸಿದರು, ಏಕೆಂದರೆ ಅದು ಸ್ಥೂಲ [ಜೀರ್ಣವಾಗುವುದಿಲ್ಲ] ಮತ್ತು ದೇಹಕ್ಕೆ ತಂಪುಂಟು ಮಾಡುತ್ತದೆ.

ಈ ಎರಡೂ ದೃಷ್ಟಿಕೋನಗಳ ನಡುವೆ ಯಾವುದು ಸರಿ ಎಂಬುದು ನನಗೆ ತಿಳಿಯುತ್ತಿಲ್ಲ. ಈ ಪದ್ಧತಿಯು ಹೇಗೆ ಹುಟ್ಟಿತು ಎಂಬುದು ನನಗೆ ಇನ್ನೂ ಬಗೆಹರಿದಿಲ್ಲ.

[ಹಸ್ತಪ್ರತಿಯ ಈ ಜಾಗದಲ್ಲಿ ಕೆಲವು ಅಂಶಗಳು ಮರೆಯಾಗಿವೆ]

ಆರ್ಥಿಕ ಕಾರಣಗಳಿಗಾಗಿ ದನವು ಮನುಷ್ಯನಿಗೆ ಸಹಕಾರಿಯಾದ ಪ್ರಾಣಿಯಾಗಿದೆ. ಪ್ರಯಾಣ ಕಾಲದಲ್ಲಿ ಸಾಮಾನುಗಳನ್ನು ಸಾಗಿಸಲು ನೆರವಾಗುತ್ತದೆ, ಕೃಷಿ ಕೆಲಸಲದಲ್ಲಿ ಭೂಮಿಯನ್ನು ಉತ್ತುವ, ಬೀಜ ಹಾಕುವ ಕೆಲಸದಲ್ಲಿ ನೆರವಾಗುತ್ತದೆ. ಮನೆಯೊಳಗೆ ಅದು ನೀಡುವ ಹಾಲು ಮತ್ತು ಹಾಲಿನಿಂದ ಮಾಡುವ ಉತ್ಪನ್ನಗಳು ಪ್ರಯೋಜನಕ್ಕೆ ಬರುತ್ತವೆ. ಅದಾದ ಮೇಲೆ ಅದರ ಸಗಣಿಯನ್ನು ಮನುಷ್ಯರು ಬಳಸುತ್ತಾರೆ ಮತ್ತು ಚಳಿಗಾಲದಲ್ಲಿ ಅದರ ಉಸಿರು ಬೆಚ್ಚಗಾಗಿಸುತ್ತದೆ. ಈ ಕಾರಣಗಳಿಗೆ ದನದ ಮಾಂಸವನ್ನು ನಿಷೇಧಿಸಿರಬಹುದು. ಅಲ್‌ಹಜಾಜ್ ಕೂಡ ಅದನ್ನು ನಿಷೇಧಿಸಿದ, ಬ್ಯಾಬಿಲೋನಿಯವು ದಿನದಿಂದ ದಿನಕ್ಕೆ ಮರುಭೂಮಿಯಾಗುತ್ತಿದೆ ಎಂದು ಜನ ಆಕ್ಷೇಪಿಸಿದ್ದರು.

**ತಾತ್ವಿಕವಾಗಿ ಎಲ್ಲ ವಸ್ತುಗಳೂ ಸಮಾನ**

ಈ ಕೆಳಗಿನ ಉಲ್ಲೇಖವು ಒಂದು ಭಾರತೀಯ ಗ್ರಂಥದ್ದು ಎಂದು ನನಗೆ ಹೇಳಲಾಗಿದೆ: “ನಿಷಿದ್ಧವೋ ಅಲ್ಲವೋ, ಎಲ್ಲ ವಸ್ತುಗಳೂ ಒಂದೇ, ಎಲ್ಲವೂ ಸಮಾನ. ಅವು ದುರ್ಬಲತೆ ಮತ್ತು ಶಕ್ತಿಯ ದೃಷ್ಟಿಯಿಂದ ಮಾತ್ರ ಭಿನ್ನವಾಗಿವೆ. ತೋಳಕ್ಕೆ ಕುರಿಯನ್ನು ಸೀಳುವ ಶಕ್ತಿ ಇದೆ; ಆದ್ದರಿಂದ ಕುರಿಯು ತೋಳದ ಆಹಾರವಾಗಿದೆ, ಕುರಿಯು ತೋಳವನ್ನು ವಿರೋಧಿಸಲಾಗದು ಮತ್ತು ಅದು ತೋಳದ ಶಿಕಾರಿಯಾಗಿದೆ.” ಹಿಂದುಗಳ ಗ್ರಂಥಗಳಲ್ಲಿ ಇದೇ ಅರ್ಥದ ಉಲೇಖಗಳು ನನಗೆ ಸಿಕ್ಕಿವೆ. ಒಬ್ಬ ಜ್ಞಾನಿಗೆ ಈ ರೀತಿಯ ನೋಟಗಳು ಕೇವಲ ಜ್ಞಾನದಿಂದಲೇ ದೊರಕುವವು. ಜ್ಞಾನೋದಯವಾದ ಮನುಷ್ಯನು ಬ್ರಾಹ್ಮಣ ಮತ್ತು ಚಂಡಾಲನ ನಡುವೆ ಬೇಧವನ್ನು ಕಲ್ಪಿಸಿಕೊಳ್ಳುವುದಿಲ್ಲ. ಅವನಿಗೆ ಆ ಇಬ್ಬರೂ ಒಂದೇ. ಅವನು ಈ ಸ್ಥಿತಿಯಲ್ಲಿದ್ದರೆ, ಉಳಿದ ಎಲ್ಲ ವಸ್ತುಗಳೂ, ಅವನು ಅದೆಲ್ಲದರಿಂದಲೂ ದೂರವಾಗಿದ್ದರೆ ಅವೆಲ್ಲವೂ ಒಂದೇ ಎಂಬುದು ಅವನಿಗೆ ಅರ್ಥವಾಗಿರುತ್ತದೆ. ಅವು ನಿಯಮಬದ್ಧವಾಗಿದ್ದರೂ ಒಂದೇ, ನಿಷಿದ್ಧವಾಗಿದ್ದರೂ ಒಂದೇ, ವ್ಯತ್ಯಾಸವೇನೂ ಇರುವುದಿಲ್ಲ. ಅನುಮತಿಸಲ್ಪಟ್ಟಿದ್ದರೂ ಅವನಿಗೆ ಅದು ಬೇಕಾಗಿರುವುದಿಲ್ಲ. ನಿಷೇಧಿಸಲ್ಪಟ್ಟಿದ್ದರೂ ಅವನು ಮೊದಲೇ ಅದನ್ನು ತ್ಯಜಿಸಿರುತ್ತಾನೆ. ಇವೆಲ್ಲವೂ ಅಗತ್ಯವಿರುವುದು ಯಾರಿಗೆ ಎಂದರೆ, ಅಜ್ಞಾನಿಗಳಿಗೆ. ಅಜ್ಞಾನವನ್ನು ಹೆಗಲೇರಿಸಿಕೊಂಡವರಿಗೆ ಕೆಲವು ಸಂಗತಿಗಳು ಅನುಮತಿಸಲ್ಪಟ್ಟಿವೆ ಮತ್ತು ಕೆಲವು ನಿಷೇಧಿಸಲ್ಪಟ್ಟಿವೆ ಎಂದು ಅನಿಸುತ್ತದೆ. ಹೀಗೆ ಎರಡು ಬಗೆಯ ಸಂಗತಿಗಳ ನಡುವೆ ಗೋಡೆಯೊಂದು ಉಗಮಿಸಿದೆ.